I was elected to this assembly on a Congress ticket on the promise of a programme which proclaimed its intention to end poverty and destitution But what actually turned out was the opposite of what was intended. A gradual deterioration in our political life was inaugurated.

The once powerful Congress degenerated into an instrument to further the ambitions of certain individuals. Organizational elections were abandoned and steady pilgrimages to Delhi took the place of organisational work. The emergency was a logical culmination of a process initiated much earlier.

Many of us tried our best to fight the steady deterioration. Members of the house are aware of the efforts we repeatedly made to focus attention on the growing corrupt practices of the Government and the Chief Minister I cannot feel but bitter that in our anxiety not to hurt the organisation, many of us also became though unwilling instruments of the power game. By not raising the banner of revolt, we may also be termed guilty of having compromised with the naked assertion of dictatorial power. By way of explanation, I can only say that many of us did not know the whole truth.

Since I was elected on the Congress ticket and on a programme which was never implemented, conscisence and the need to set up healthy traditions demand that I resign my membership of the house.

I am convinced that a time has come to begin a new era. We must see that never again we shall allow a repetition of the events that lead to untold sufferings to hundreds and thousands of our countrymen.

I know a number of Congressmen share my views. I am appealing to them all to resign from the Congress as well as the house so that the process of cleasing our political life initiated in the general elections can be taken a step further.

Budget Estimates for 1977-78 General Discussion Debate (Contd)

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ವರ್ಷದ ಬಡ್ಜೆಟ್ ಚರ್ಚೆಗೆ ಉತ್ತರ ಕೊಡುವುದು ನನ್ನ ಜವಾಬ್ದಾರಿ. ಆದುದರಿಂದ ಮಾನ್ಯ ಸದಸ್ಯರುಗಳು ಮಾಡಿರತಕ್ಕ ಎಲ್ಲಾ ಟೀಕೆಗಳಿಗೂ ಸಾಧ್ಯವಾದ ಮಟ್ಟಿಗೂ ಉತ್ತರ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆದುದರಿಂದ ಸಾವಧಾನದಿಂದ ವಿರೋಧಪಕ್ಷದ ಸದಸ್ಯರು ಇದನ್ನು ಕೇಳಬೇಕು ಎಂದು ಹೇಳಿ ನನ್ನ ವಿನಂತಿ. ಮಾನ್ಯ ವಿರೋಧಪಕ್ಷದ ನಾಯಕರಾದ ದೇವೇಗೌಡರು ಒಂದು ತಾಸು ಭಾಷಣ ಮಾಡಿ ಇವೊತ್ತು ನನ್ನ ಉತ್ತರ ಕೇಳಲಿಕ್ಕೆ ಸಭೆಯಲ್ಲಿ ಇಲ್ಲ. ಅವರು ರಾಜಕೀಯ ಹವ್ಯಾಸ ಬೇಕಾದಷ್ಟು ಇರುವುದರಿಂದ ಡೆಲ್ಲಿಗೆ ಹೋಗಬೇಕಾಯಿತು. ರಾಜಕೀಯ ಚಟುವಟಿಕೆಗಳು ಸ್ವಲ್ಪ ಬದಲಾಯಿಸುತ್ತಿದ್ದು. ಚಟುವಟಿಕೆಗಳೆಲ್ಲಾ ಹೆಚ್ಚಿಗೆ ಡೆಲ್ಲಿಯಲ್ಲಿ ನಡೆಯುತ್ತಿರುವುದರಿಂದ ಅವರು ಇವೊತ್ತು ಸಭೆಯಲ್ಲಿ ಇಲ್ಲ. ಮಾನ್ಯ ದೇವೇಗೌಡರು ಭಾಷಣ ಮಾಡುವಾಗ ಬಹಳ ಲಕ್ಷ್ಯ ಕೊಟ್ಟು ಕೇಳಿದ್ದೇನೆ, ಅವರು ಹೇಳಿದ್ದನ್ನು ನೋಡಿದರೆ

ನನ್ನ ಭಾಷಣವನ್ನು ಪೂರ್ತಿ ಓದಲಿಲ್ಲ ಎಂದು ಕಾಣಿಸುತ್ತದೆ. ಅವರು ನನ್ನ ಭಾಷಣದ ಮೊದಲನೇ ಪ್ಯಾರಾಗ್ರಾಫ್ ಓದಿ ನಂತರ ಕಡೇ ಪ್ಯಾರಾಗ್ರಾಫ್ ಓದಿರಬಹುದು ಈ ಎರಡು ಪ್ಯಾರಾಗ್ರಾಫ್‌ಗಳನ್ನು ಓದಿ ಒಂದು ತಾಸು ಭಾಷಣ ಮಾಡಿದ್ದಾರೆ ಅವರು ಭಾಷಣದ ಮಧ್ಯದಲ್ಲಿರತಕ್ಕ ಮುಖ್ಯ ವಿಷಯಗಳ ಕಡೆ ಗಮನ ಕೊಟ್ಟಿಲ್ಲ. ಅವರ ಬಗ್ಗೆ ಪ್ರಸ್ತಾಪ ಕೂಡ ಮಾಡಿಲ್ಲ. ಉದಾಹರಣೆಗೆ ಈ ವರ್ಷದ ಬಡ್ಜೆಟ್‌ನಲ್ಲಿ ನ್ಯೂಟ್ರಿಷನ್ ಪ್ರೋಗ್ರಾಂ ಪ್ರಕಾರ 17 ಲಕ್ಷ ಮಕ್ಕಳಿಗೆ ನಾವು ಏನು ಮಧ್ಯಾಹ್ನ ಊಟ ಕೊಡುತ್ತೇವೆ ಅದನ್ನು 23 ಲಕ್ಷ ಮಕ್ಕಳಿಗೆ ಏರಿಸಬೇಕೆಂದು ಒಂದು ಕಾರ್ಯಕ್ರಮ ಡಿಸೇಬಲ್ಡ್ ಜನರು ಏನು ಇದ್ದಾರೆ ಅವರಿಗೋಸ್ಕರ ವಿಶೇಷವಾದ ಕಾರ್ಯಕ್ರಮ, ಬರಗಾಲದ ಬಗ್ಗೆ ಒಂದು ಕಾರ್ಯಕ್ರಮ ಇಂತವುಗಳನ್ನು ಹೇಳಿದರೂ, ವೆಲ್‌ಫೇರ್ ಕಾರ್ಯಕ್ರಮಗಳನ್ನು ಈ ಬಡ್ಜೆಟ್‌ನಲ್ಲಿ ಸೇರಿಸಿದ್ದರು ಅವರ ಬಗ್ಗೆ ಲಕ್ಷ್ಯ ಕೊಟ್ಟಿಲ್ಲ. ಅವರಿಗೆ ಲಕ್ಷ್ಯ ಕೊಡುವ ಮನಸ್ಸು ಇರಲಿಲ್ಲ ಎಂದು ನನಗನಿಸುತ್ತದೆ. ಅವರು ತೀವ್ರವಾಗಿ ಟೀಕೆ ಮಾಡಿದ್ದು ನನ್ನ ಬಡ್ಜೆಟ್ ಭಾಷಣದ ಮೊದಲನೇ ಪ್ಯಾರಾಗ್ರಾಫ್. ಈಗ ನನ್ನ ಭಾಷಣದ ಮೊದಲನೇ ಪ್ಯಾರಾ ಏನು ಇದೆ ಅದನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ಅದರಲ್ಲಿ ಒಂದು ಅಕ್ಷರ ಕೂಡ ಸತ್ಯಕ್ಕೆ ದೂರವಾದುದು ಇಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾನು ಮೊದಲನೇ ಪ್ಯಾರಾದಲ್ಲಿ ಏನು ಹೇಳಿದ್ದೇನೆ. ಕರ್ನಾಟಕದಲ್ಲಿ ಮಹಾಜನತೆ ಚುನಾವಣೆಯಲ್ಲಿ ಸಂಪೂರ್ಣವಾಗಿ ಬೆಂಬಲ, ಪ್ರಚಂಡ ಬೆಂಬಲ ಸರ್ಕಾರಕ್ಕೆ ಕೊಡಬೇಕಾದರೆ ಅದಕ್ಕೆ ಕಾರಣ ಏನು ಹೇಳಿದ್ದೇನೆ. ಮುಖ್ಯವಾಗಿ ಕಾರ್ಯಕ್ರಮಗಳು ಏನು ಇವೆ ಆ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡತಕ್ಕ ವಿಧಾನ ಏನು ಇದೆ ಅದನ್ನು ನಮ್ಮ ಜನರು ಒಪ್ಪಿದ್ದಾರೆ. ಆ ಕಾರ್ಯಕ್ರಮದಲ್ಲಿರತಕ್ಕ ಸಾಮಾಜಿಕ ನ್ಯಾಯದ ಅಂಶವನ್ನು ಅವರು ಒಪ್ಪಿದ್ದಾರೆ. 5 ವರ್ಷಗಳ ಕಾಲ ಕರ್ನಾಟಕಕ್ಕೆ ಭದ್ರವಾದಂತ ಪ್ರಗತಿಪರ ಸರ್ಕಾರ ಕೊಟ್ಟಿದೆ ಎಂದು ಜನರು ಮೆಚ್ಚಿದ್ದಾರೆ. ನಮ್ಮ ಕಾರ್ಯಕ್ರಮ ಏನು ಇದೆ ಅದು ಸಮತೋಲನ ದೃಷ್ಟಿಯಿಂದ ಮಾಡಿರತಕ್ಕದ್ದು ಅದರಲ್ಲಿ ಲಾಂಗ್ ಟರ್ಮ್ ಟರ್ಮ್ ಎಂದರೆ, ನಮ್ಮ ಕರ್ನಾಟಕದ ಬಗ್ಗೆ ಸಾಕಷ್ಟು ಮುಖ್ಯ ವಿಷಯಗಳು ಇವೆ ಉದಾಹರಣೆಗೆ ಕಳೆದ 5 ವರ್ಷಗಳಲ್ಲಿ ನಾವು ನೀರಾವರಿ ಕಾರ್ಯಕ್ರಮ ಮಾಡಿದಷ್ಟು, ಅದಕ್ಕೆ ಮುಂಚೆ 1974-75 ವರ್ಷದಲ್ಲಿ ಆಗಿರಲಿಲ್ಲ. ನೀರಾವರಿ ಕಾರ್ಯಕ್ರಮ ಬಗ್ಗೆ ಬೃಹತ್ ಕಾರ್ಯಕ್ರಮ ಹಾಕಿಕೊಂಡು ಹೋಗಿದ್ದೇವೆ. ಇನ್ನು ವಿದ್ಯುಚ್ಛಕ್ತಿ ಕಾರ್ಯಕ್ರಮ. ಕಾಳಿ ನದಿ ಕಾರ್ಯಕ್ರಮ ಇದು ಇಡೀ ದೇಶದಲ್ಲೇ ಮೆಚ್ಚತಕ್ಕದ್ದು ಇದರ ಜೊತೆಗೆ ಬಡಜನರಿಗೆ ಎಷ್ಟು ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೋ ಅಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹಳ್ಳಿ ಹಳ್ಳಿಗಳಲ್ಲಿ ಗುಡಿಸಲುಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಈ ಒಂದು ಕಾರ್ಯಕ್ರಮ ಏನಿದೆ ಇದನ್ನು ಬೇರೆ ಯಾವ ರಾಜ್ಯಗಳಲ್ಲೂ ಮಾಡಿಲ್ಲ. ನಮ್ಮ ಕರ್ನಾಟಕದಲ್ಲಿ ನಾವೇ ಮಾಡಿಕೊಂಡಿರತಕ್ಕದ್ದು. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 1 ಲಕ್ಷ 60 ಸಾವಿರ ಜನರಿಗೆ ವೃದ್ಧಾಪ್ಯ ವೇತನವನ್ನು ಕೊಡುತ್ತಿದ್ದೇವೆ ಇದು ಕೂಡ ಕರ್ನಾಟಕದಲ್ಲಿ ಮಾತ್ರ ಇರತಕ್ಕಂಥಾದ್ದು.

1-30 P. M.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಜಿಲ್ಲೆಯಲ್ಲಿ ಎಷ್ಟು ಜನರಿದ್ದಾರೆ ? ಏಕೆಂದರೆ ತಾವು ಒಂದು ಸಾರಿ ಬಳ್ಳಾರಿಯಲ್ಲಿ ಭಾಷಣ ಮಾಡಿದ್ದನ್ನು ಕೇಳಿದ್ದೇವೆ ಆಗ ತಾವು ಏನು ಹೇಳಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವ್ಹೈ. ಘೋರ್ಪಡೆ —ನಮ್ಮ ಜಿಲ್ಲೆಯಲ್ಲೂ ಸಾಕಷ್ಟು ಜನರಿದ್ದಾರೆ. ಇವತ್ತಿನ ದಿವಸ ರಾಜ್ಯದಲ್ಲಿ ಯಾರು ಅಂಗವಿಕಲರಿದ್ದಾರೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ, ಅವರು ಸ್ವತಃ ದುಡಿದು ಜೀವನ ನಡೆಸುವುದಕ್ಕೆ ಅನುಕೂಲವಾಗಲಿ ಎಂದು ಇದನ್ನು ಬಡ್ಜೆಟ್‌ನಲ್ಲಿ ಸೇರಿಸಿದ್ದೇನೆ. ಇವತ್ತು 3 ಲಕ್ಷ ಜನರಿಗೆ ಕೆಲಸವನ್ನು ಕೊಟ್ಟಿದ್ದೇವೆ. ಕಾಳಿನ ಹಂಚಿಕೆ ಮಾಡುತ್ತಿದ್ದೇವೆ. ನೀರಿನ ಹಂಚಿಕೆ ಮಾಡುತ್ತಿದ್ದೇವೆ. ನಾವು ಮಾಡಿರುವ ಕೆಲಸಗಳನ್ನು ಜನತೆ ನೋಡಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಚುನಾವಣೆಯಲ್ಲಿ ತಮ್ಮ ಬೆಂಬಲವನ್ನು

ಸಂಪೂರ್ಣವಾಗಿ ಕೊಟ್ಟಿದ್ದಾರೆ. ಇದರಲ್ಲಿ ಉತ್ಪ್ರೇಕ್ಷೆ ಏನದ ಇಲ್ಲ. ಇವತ್ತು ರಾಜ್ಯದಲ್ಲಿ ಅಭಾವ ಇರಬಹುದು. ಆದರೆ ಬೆಲೆಗಳು ಜಾಸ್ತಿಯಾಗಿಲ್ಲ. ಜೋಳ ರಾಗಿ ಇವುಗಳ ಬೆಲೆಗಳೂ ಕೂಡ ಜಾಸ್ತಿಯಾಗಿಲ್ಲ ನಮ್ಮ ಕರ್ನಾಟಕದಲ್ಲಿ ಈ ಬೆಲೆಗಳು ಹಿಡಿತದಲ್ಲಿರುವಷ್ಟು ಬೇರೆ ಯಾವ ರಾಜ್ಯದಲ್ಲೂ ಬೆಲೆಗಳು ಹಿಡಿತದಲ್ಲಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ನಮ್ಮ ಕೇಂದ್ರ ಸರ್ಕಾರದವರು ಬ್ಲಾಕ್ ಮಾರ್ಕೆಟಿಯರ್ಸ್ ವಿರುದ್ಧವಾಗಿ ತೆಗೆದುಕೊಂಡು ಶಿಸ್ತಿನ ಕಾರ್ಯಕ್ರಮಗಳು ದೇಶದಲ್ಲಿ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಯಿತು. ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಬಹಳ ಮಹತ್ವವಾದುದು.

ಶ್ರೀ ಎಂ ಎಸ್ ಕೃಷ್ಣನ್ —ನಿಮ್ಮ ಮೇಲೆ ಇರುವ ಟೀಕೆ, ಬ್ಲಾಕ್‌ಮಾರ್ಕೆಟಿಯರ್ಸ್‌ನ್ನು ಹಿಡಿಯಲಿಲ್ಲ, ಅವರ ಚಪ್ರಾಸಿಗಳನ್ನು... ....

ಶ್ರೀ ಎಂ. ವೈ. ಘೋರ್ಪಡೆ.—ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟರೆ- ತಾವು ಕೇಳುವ ಪ್ರತಿಯೊಂದು ಪ್ರಶ್ನೆಗೂ ಕೂಡ ನಿಧಾನವಾಗಿ ಉತ್ತರ ಕೊಡುತ್ತೇನೆ ನನ್ನ ಮೊದಲನೇ ಪ್ಯಾರಾದಲ್ಲಿ ಮಾತೊಂದು ಉತ್ತರವನ್ನು ತಮಗೆ ಕೊಟ್ಟಿದೇನೆ. ಅದು ಏನೆಂದರೆ, ಈಗಿನ ಪ್ರಗತಿಯ ವೇಗವನ್ನು ಕಾಪಾಡಿಕೊಂಡು ಬರಬೇಕಾದರೆ ಶಿಸ್ತು ಹಾಗೂ ರಚನಾತ್ಮಕ ಸಹಕಾರ ವಾತಾವರಣ ಮುಂದುವರಿದುಕೊಂಡು ಬರುವುದು ಅಗತ್ಯ ಎಂದು. ಇದರಲ್ಲಿ ತಪ್ಪೇನಿದೆ ಅಂತಿಮವಾಗಿ ವಿಶ್ಲೇಷಣೆ ಮಾಡುತ್ತಾ ನಮ್ಮ ದೇಶ ಪ್ರಗತಿಯನ್ನು ಸಲ್ಲಿಸಬೇಕಾದರೆ ಅದು ಸಮಾಜವಾದ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ತಳಹದಿಯ ಮೇಲೆ ಕೆಲಸ ಮಾಡಬೇಕಾಗುತ್ತದೆಂದು ಹೇಳಿದ್ದೇನೆ. ಮಾನ್ಯ ಅಧ್ಯಕ್ಷಿಣಿಯವರೆ, ತಾವೇ ಹೇಳಿ ಇದರಲ್ಲಿ ಏನು ತಪ್ಪಿದೆ ಎಂಬುದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಇದರ ಮೇಲೆ ಟೀಕೆ ಮಾಡುವ ಪ್ರಮೇಯವೇ ಇರಲಿಲ್ಲ. ಮಾನ್ಯ ಸದಸ್ಯರು ಮಾತನಾಡುವಾಗ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆದ್ದಿದ್ದರೆ ಅದು ಭಯದ ವಾತಾವರಣದಲ್ಲಿ ಗೆದ್ದಿದೆ ಎಂಬುದಾಗಿ ಹೇಳಿದ್ದಾರೆ. ಇದು ಎಷ್ಟುಮಟ್ಟಿಗೆ ಸತ್ಯ ಎಂಬುದು ರಾಜ್ಯದಲ್ಲಿ ಎಲ್ಲರಿಗೂ ಗೊತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಇದು ಪೂರ್ಣ ಸತ್ಯ.

ಶ್ರೀ ಎಂ. ವೈ. ಘೋರ್ಪಡೆ —ಉತ್ತರ ಹಿಂದೂ ಸ್ಥಾನದಲ್ಲಿ ಅವರ ಪರವಾಗಿ ಓಟು ಹಾಕಿರುವುದರಿಂದ ಅಲ್ಲಿ ನಿರ್ಭಯವಾಗಿ ಓಟು ಮಾಡಿದ್ದಾರೆ, ಆದರೆ ದಕ್ಷಿಣ ಹಿಂದೂಸ್ಥಾನದಲ್ಲಿ ಕಾಂಗ್ರೆಸ ಪರವಾಗಿ ಓಟು ಹಾಕಿರುವುದರಿಂದ ಇಲ್ಲಿ ಭಯದಿಂದ ಓಟು ಹಾಕಿದ್ದಾರೆ ಎಂದು ಹೇಳುತ್ತಿದ್ದಾರೆ. ಇದು ಎಷ್ಟು ಮಟ್ಟಿಗೆ ಸರಿ ಎಂಬುದನ್ನು ತಾವೇ ಯೋಚನೆ ಮಾಡಿ. ಮಾನ್ಯ ಅಧ್ಯಕ್ಷಿಣಿಯವರೆ, ನಾನು ಹೇಳುತ್ತೇನೆ, ನಿರ್ಭಯವಾಗಿ ಜನತೆ ಓಟು ಮಾಡಿರುವುದು ಎಂದರೆ ದಕ್ಷಿಣ ಹಿಂದೂಸ್ಥಾನದಲ್ಲಿ ಮಾತ್ರ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಏತಕ್ಕೆ ಪಾರ್ಲಿಮೆಂಟಿಗೆ ಹೋಗಲಿಲ್ಲ ?

ಶ್ರೀ ಎಂ. ವೈ. ಘೋರ್ಪಡೆ —ತಾವು ರಾಜಕೀಯವಾಗಿ ಪ್ರಶ್ನೆ ಹಾಕಿದಮೇಲೆ ನಾನೂ ಕೂಡ ರಾಜಕೀಯವಾಗಿಯೇ ತಮಗೆ ಉತ್ತರ ಕೊಡಬೇಕಲ್ಲವೆ ? ಮಾನ್ಯ ಅಧ್ಯಕ್ಷಿಣಿಯವರೆ, ಇದು ಬರೀ ನಮ್ಮ ಪಕ್ಷದವರೇ ಹೇಳಿದಂತಹ ಮಾತು, ಇವತ್ತಿನ ನಮ್ಮ ರಾಷ್ಟ್ರಪತಿಗಳೂ ಕೂಡ ಇದನ್ನು ಒಪ್ಪಿದ್ದಾರೆ. ' There has been less oppression in the South.'' ಅಂದರೆ ದಕ್ಷಿಣ ಹಿಂದೂಸ್ಥಾನದಲ್ಲಿ ಅಷ್ಟಾಗಿ ದೌರ್ಜನ್ಯ ನಡೆಯಲಿಲ್ಲ ಎಂದು ಬಹಿರಂಗವಾಗಿ ಅವರೇ ಒಪ್ಪಿಕೊಂಡಿದ್ದಾರೆ, ಪ್ರಧಾನ ಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವ ಇದೆ. ಒಂದೊಂದು ಸಲ ಅವರು ಸತ್ಯವನ್ನು ಹೇಳಿಬಿಡುತ್ತಾರೆ

ಶ್ರೀ ಕೋಣಂದೂರು ಲಿಂಗಪ್ಪ.—ಒಂದೊಂದು ಸಲ ಎಂದು ಏತಕ್ಕೆ ಹೇಳುತ್ತೀರಿ. ಅವರು ಯಾವಾಗಲೂ ಸತ್ಯವನ್ನೇ ಹೇಳುತ್ತಾರೆ

ಶ್ರೀ ಎಂ, ವೈ. ಘೋರ್ಪಡೆ —ಈ ಸಾರಿಯಂತೂ ಅವರು ಸತ್ಯವನ್ನು ಹೇಳಿದ್ದಾರೆ. ಅದ ಏನಾದರೂ ಆಗಲಿ. ಅಲ್ಲಿ ನಿರ್ಭಯವಾಗಿ ಓಟು ಹಾಕಿದ್ದಾರೆ, ಇಲ್ಲಿ ಭಯದಿಂದ ಎನ್ನುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಈಗ ಸಮಯವಲ್ಲ ಮುಖ್ಯವಾಗಿ ಹೇಳುವುದಾದರೆ, ದೇಶದಲ್ಲಿ

ಎಮರ್ಜೆನ್ಸಿಯನ್ನು ತಂದಮೇಲೆ ಅದನ್ನು ರಚನಾತ್ಮಕ ಕೆಲಸಕ್ಕಾಗಿಯೇ ನಾವು ಉಪಯೋಗ ಮಾಡಿಕೊಂಡಿದ್ದೇವೆ ; ದೌರ್ಜನ್ಯ ಮಾಡುವುದಕ್ಕೋಸ್ಕರ ಅಲ್ಲ ಎಂದು ಹೇಳಬಯಸುತ್ತೇನೆ. ಇದನ್ನು ಮಾನ್ಯ ಮೊರಾರ್ಜಿಯವರೂ ಕೂಡ ಒಪ್ಪಿಕೊಂಡಿದ್ದಾರೆ. ಮಾನ್ಯ ದೇವೇಗೌಡರು ಮಾತನಾಡುತ್ತಾ, ಈ ಸಾರಿ ಕನ್‌ಸ್ಟ್ರಕ್ಟಿವ್ ಕೋ ಆಪರೇಷನ್ ಬಗ್ಗೆ ಗಮನ ಕೊಟ್ಟಿಲ್ಲವೆಂದು ಒತ್ತಿ ಒತ್ತಿ ಹೇಳಿದ್ದಾರೆ. ಕೇಂದ್ರಕ್ಕೂ ರಾಜ್ಯಕ್ಕೂ ಸಂಬಂಧ ಕಲ್ಪಿಸಿಕೊಂಡು ಬರುವುದು ಕನ್‌ಸ್ಟ್ರಕ್ಟೀವ್ ಕೋ ಆಪರೇಷನ್, ನಮಗೆ ಇದು ಸಾಲದು, ನಮಗೆ ಅನ್ ಕಂಡೀಷನಲ್ ಕೋ ಆಪರೇಷನ್ ಬೇಕೆಂಬುದಾಗಿ ತಾವು ಹೇಳುವುದಾದರೆ ಅದು ಪ್ರಜಾಪ್ರಭುತ್ವದಿಂದ ಬರಬೇಕಾದ ಮಾತಲ್ಲ. ಅದಕ್ಕೆ ನಿರಂಕುಶ ಪ್ರಜಾಪ್ರಭುತ್ವ ಎಂದು ಹೇಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷಿಣಿಯವರೆ, ನಾನು ಹೇಳುವುದಿಷ್ಟು. ಪ್ರಜಾಪ್ರಭುತ್ವದಲ್ಲಿ ಯಾವ ಪಕ್ಷದವರೇ ಆಗಲಿ ಒಳ್ಳೆಯ ಕೆಲಸವನ್ನು ಮಾಡಿದರೆ ಅದನ್ನು ಒಪ್ಪಿಕೊಳ್ಳಬೇಕು, ಸರ್ಕಾರದವರು ಒಂದು ಒಳ್ಳೆಯ ಕೆಲಸವನ್ನು ಮಾಡಿದರೆ ಅವನ್ನೂ ಒಪ್ಪಿಕೊಳ್ಳಬೇಕು. ಒಂದು ವೇಳೆ ಸರ್ಕಾರವೇ ಆಗಲಿ, ಅಥವಾ ಬೇರೆ ಯಾರೇ ಆಗಲಿ ತಪ್ಪು ದಾರಿಯಲ್ಲಿ ಇಡಿದರೆ ಅದನ್ನು ತಪ್ಪು ಎಂದು ಹೇಳಬೇಕು. ಒಬ್ಬರಿಗೊಬ್ಬರಿಗೆ ರಿಲೇಷನ್‌ಷಿಪ್ ಇರಬೇಕು. ಅನ್ ಕಂಡೀಷನ್ ಕೋ ಆಪರೇಷನ್ ಏನಿದೆ ಅದನ್ನು ಯಾರೂ ಕೂಡ ಒಪ್ಪುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಇಂದಿರಾ ಈಸ್ ಇಂಡಿಯಾ, ಇಂಡಿಯಾ ಈಸ್ ಇಂದಿರಾ ಎಂಬುದನ್ನು ಒಪ್ಪುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ —ನಾನು ಭಾಷಣ ಮಾಡುವಾಗ ಈರೀತಿ ಮಧ್ಯೆ ಮಧ್ಯೆ ಮಾತನಾಡುತ್ತಿದ್ದರೆ, ಯಾವ ರೀತಿ ನಾನು ಉತ್ತರ ಹೇಳಬೇಕೋ ಗೊತ್ತಾಗುವುದಿಲ್ಲ. ತಾವು ಇವತ್ತು ಕಾನ್‌ಸ್ಟಿಟ್ಯೂಷನ್ ಬಗ್ಗೆ ಮಾತನಾಡುತ್ತೀರಿ. ಆದರೆ ಅದೇ ಕಾನ್‌ಸ್ಟಿಟ್ಯೂಷನ್‌ನ್ನು ನೀವೇ ಧಿಕ್ಕಾರ ಮಾಡಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ.—ನಾವೇನೂ ಧಿಕ್ಕಾರ ಮಾಡಿಲ್ಲ.

ನಿಮ್ಮ ಪಕ್ಷದವರು ಇಡೀ ದೇಶದಲ್ಲಿಯೇ ಒಂಬತ್ತು ರಾಜ್ಯಗಳನ್ನು ರದ್ದುಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಏನು ಕಾನ್‌ಸ್ಟಿಟ್ಯೂಷನಲ್ ಆಧಾರವಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ —ಈ ಮಾತನ್ನು ನೀವು ಕೇಳುವುದಕ್ಕೆ ನಿಮಗೆ ಏನು ಮೊರ್ಯಾಲಿಟಿ ಕಾಂಪ್ಲೆಕ್ಸ್ ಇದೆಯೇ ಎಂದು ಕೇಳುತ್ತೇನೆ,

ಸಿ ಬೈರೇಗೌಡ. -1959ನೇ ಇಸವಿಯಲ್ಲಿ ಕೇರಳದಲ್ಲ ಶ್ರೀ ನಂಬೂದರಿಪಾಡ್ ಅವರ ಸರ್ಕಾರವನ್ನು ವಜಾಮಾಡಿದಿರಿ. ಅವರನ್ನು ತೆಗೆಯಬೇಕಾದರೆ ಅವತ್ತಿನ ದಿವಸ ಪ್ರಜಾಪ್ರಭುತ್ವ ಏನಾಗಿತ್ತು ?

ಶ್ರೀ ಕಾಗೋಡು ತಿಮ್ಮಪ್ಪ.—42ನೇ ತಿದ್ದುಪಡಿಯನ್ನು ಎಲ್ಲರೂ ಒಪ್ಪಿದರು ಅದರ ಪ್ರಕಾರವಾಗಿ ಕೇಂದ್ರ ಸರ್ಕಾರದ ಸಲಹೆಯನ್ನು ರಾಜ್ಯ ಸರ್ಕಾರಗಳು ಒಪ್ಪಲೇಬೇಕು ಎನ್ನುವ ತಿದ್ದುಪಡಿಯನ್ನು ಮಾಡಿದಿರಿ. ಆ ರೀತಿ ತಿದ್ದುಪಡಿಯನ್ನು ಮಾಡುವಾಗ ಎಲ್ಲಿಹೋಗಿತ್ತು ನಿಮ್ಮ ಪ್ರಜಾಪ್ರಭುತ್ವದ ನೀತಿ.

ಶ್ರೀ ಎಂ. ವೈ. ಘೋರ್ಪಡೆ —ರೂಲ್ ನಂ. 366ರ ಪ್ರಕಾರ ರಾಜ್ಯಮಟ್ಟದಲ್ಲಿ ಏನಾದರೂ ಸರ್ಕಾರವನ್ನು ನಡೆಸಲಿಕ್ಕೆ ಸಾಧ್ಯವಾಗದಿದ್ದರೆ ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್ ಪ್ರಕಾರ ಸರ್ಕಾರ ಡೌನ್ ಆಗುತ್ತಿತ್ತು. ರೂಲ್ ನಂ 360ರ ಪ್ರಕಾರ ನಾವು ಪ್ರೆಸಿಡೆಂಟ್ ರೂಲ್‌ನ್ನು ತರಲಿಕ್ಕೆ ಸಾಧ್ಯವಿತ್ತು, ಅದರ ಪ್ರಕಾರ ಡಾ. ಅಂಬೇಡಕರ್‌ರವರು ಒಂದು ಕಾಲಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ, ಡಾ. ಅಂಬೇಡಕರ್‌ರವರು ಏನು ಹೇಳಿದ್ದಾರೆಂದರೆ: "Such Articles will never be called into operation and that they would remain a dead letter If at all they are brought into operation, I hope the President who is endowed with these powers shall precautions before actually suspending the administration of provinces The dangers

are that on the pretext of purifying or reforming the administration the President may have recourse to this article " ಅಂಥ ಎಲ್ಲ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರ ಇವತ್ತಿಗೂ ಕೂಡ ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸಮಾಡಿದ್ದಾರೆ. ಎಲ್ಲೆಲ್ಲಿ ಸರ್ಕಾರಗಳು ಬ್ರೇಕ್ ಡೌನ್ ಆಗಿತ್ತೋ ಅಂಥ ಕಡೆ ಪ್ರೆಸಿಡೆಂಟ್ ರೂಲನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆ ರೀತಿ ಒಂದು ನಾರ್ಮಲ್ ಬೇಸಿಸ್ ಮೇಲೆ ಕೆಲಸಮಾಡಿಕೊಂಡು ಸರ್ಕಾರವನ್ನು ನಡೆಸಿಕೊಂಡು ಹೋಗಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಬಹುಗುಣರವರನ್ನು ತೆಗೆದರಲ್ಲಾ ಯಾವ ಕಾನ್‌ಸ್ಟಿಟ್ಯೂಷನಲ್ ಪ್ರಾವಿಜನ್ ಪ್ರಕಾರ, ಯಾವ ಕಾನ್‌ಸ್ಟಿಟ್ಯೂಷನ್‌ನ ಆಧಾರದ ಮೇಲೆ ತೆಗೆದಿರಿ ಸ್ವಾಮಿ ? ಇದಕ್ಕೆ ಸುಪ್ರೀಮ್ ಕೋರ್ಟಿನ ಒಪೀನಿಯನ್ ತೆಗೆದುಕೊಂಡಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ವೈ ಘೋರ್ಪಡೆ.—142ನೇ ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್ ಪ್ರಕಾರ ಈ ರೀತಿ ಅವರು ಮಾಡುವುದಕ್ಕೆ ಬರುತ್ತದೋ ಇಲ್ಲವೋ ಎನ್ನುವ ಸುಪ್ರೀಮ್ ಕೋರ್ಟಿನ ಅಭಿಪ್ರಾಯವನ್ನು ಕೇಳಬೇಕು ಎಂದು ನಮ್ಮ ಪಾರ್ಟಿಯವರು ಹೇಳಿದ್ದಾರೆ. ಈ ವಿಷಯದಲ್ಲಿ ಸುಪ್ರೀಮ್ ಕೋರ್ಟಿನ ಒಪೀನಿಯನ್ ತೆಗೆದುಕೊಳ್ಳುವುದಕ್ಕೆ ಆಸ್ಪದ ಇದೆ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ಕಾದು ನೋಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—42ನೇ ತಿದ್ದುಪಡಿಯನ್ನು ಪಾರ್ಲಿಮೆಂಟ್ ತಂದಾಗ ಸುಪ್ರೀಮ್ ಕೋರ್ಟಿನ ಒಪೀನಿಯನ್ ಪಡೆದರೇ ಸ್ವಾಮಿ ?

ಶ್ರೀ ಎಂ. ವೈ. ಘೋರ್ಪಡೆ.—ಈ ಪ್ರಶ್ನೆಗೂ ಆ ಪ್ರಶ್ನೆಗೂ ಸಂಬಂಧವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತಿನವರೆಗೂ ಅಂದರೆ 30 ವರ್ಷಗಳ ಕಾಲದವರೆಗೂ ಯಾವ ಕ್ಷೇತ್ರದಲ್ಲೂ ಯಾವ ಸಂದರ್ಭದಲ್ಲೂ ಬ್ರೇಕ್ ಡೌನ್ ಆದಾಗ ಸುಪ್ರೀಮ್ ಕೋರ್ಟಿನ ಅಭಿಪ್ರಾಯವನ್ನು ಪಡೆದಿಲ್ಲ. ಪಡೆಯಲಿಕ್ಕೆ ಅಗತ್ಯಕೂಡ ಇರಲಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನಿಮ್ಮ ಪಕ್ಷದವರು ನ್ಯಾಷನಲ್ ಕ್ರೈಸಿಸ್ ಮಾಡಿದ್ದಾರೆ. ಒಂಬತ್ತು ರಾಜ್ಯಗಳಲ್ಲಿ ಸುಪ್ರೀಮ್ ಕೋರ್ಟಿನ ಒಪೀನಿಯನ್ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಅಧಿಕಾರವನ್ನು ತೆಗೆಯುವುದಕ್ಕೆ ಹೊರಟಿದ್ದಾರೆ. ಕಾನ್‌ಸ್ಟಿಟ್ಯೂಷನ್‌ನಲ್ಲಿರ ತಕ್ಕಂಥ ಪ್ರಾವಿಷನ್‌ಗೂ ಇದಕ್ಕೂ ಸಂಬಂಧವಿಲ್ಲವೆಂದೂ, ಇದು ಒಂದು ಮೊರ್ಯಾಲಿಟಿ ಪ್ರಶ್ನೆ ಎಂದು ಹೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ ಯಾವಾಗ ಕಾನ್‌ಸ್ಟಿಟ್ಯೂಷನ್ ಸಹಾಯ ಮಾಡುವುದಿಲ್ಲವೋ ಆವಾಗ ಮೊರ್ಯಾಲಿಟಿ ಬರುತ್ತದೆ. ನೆಪೋಲಿಯನ್ ಒಂದು ಕಡೆ 'Morality lies on the side which has heaviest artillery'. ಎಂದು ಹೇಳಿದ್ದಾನೆ. ಯಾರ ಕಡೆ ಬಂದೂಕ್ ಜಾಸ್ತಿ ಇದೆ ಅವರ ಕಡೆ ಮೊರ್ಯಾಲಿಟಿ ಇರುತ್ತದೆ. ಅಂಥಾ ಮೊರ್ಯಾಲಿಟಿ ನಾವು ಹೇಳುವುದಾದರೆ ಅದು ಬೇರೆ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ಮೇ 12, 1975ರಂದು ಅಲಹಾಬಾದ್ ಸುಪ್ರೀಮ್ ಕೋರ್ಟ್ ಜಡ್ಜ್‌ಮೆಂಟ್ ಬಂದನಂತರ ಬದಲಾವಣೆಯನ್ನು ಮಾಡಿದಿರಲ್ಲ, ಯಾವ ಕಾನ್‌ಸ್ಟಿಟ್ಯೂಷನ್ ಆಧಾರದ ಮೇಲೆ ಮಾಡಿಕೊಂಡಿರಿ ?.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೆ ಈ ರೀತಿ ಮಾಡುವುದಾದರೆ ನಮ್ಮ ದೇಶದಲ್ಲಿ ಏನು ಒಂದು ಫೆಡರಲ್ ಸ್ಟ್ರಕ್ಚರ್‌ನ್ನು ನಾವು ಎಷ್ಟು ವರ್ಷಗಳಿಂದ ಕಾಪಾಡಿಕೊಂಡು ಬಂದಿರುತ್ತೇವೆ ಅದಕ್ಕೆ ಒಂದು ಧಕ್ಕೆ ತರುವಂಥಾ ಕೆಲಸವನ್ನು ಮಾಡಿದಂತಾಗುತ್ತದೆಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ಇವತ್ತು ಕಾಂಗ್ರೆಸ್ ಸರ್ಕಾರ ಕಾನ್‌ಸ್ಟಿಟ್ಯೂಷನ್ ಬದಲಾವಣೆ ಮಾಡಿದಕ್ಕೆ ಸಾಕಷ್ಟು ಮಟ್ಟಿಗೆ ಟೀಕೆ ಮಾಡಿದ್ದಾರೆ. ಇವತ್ತು ನಿಮ್ಮ ಪಕ್ಷ ಒಂದು ಆಹ್ವಾನವನ್ನು ಕೊಟ್ಟಿದ್ದಾರೆ ಡಿಫೆಕ್ಟರ್ಸ್ ಯಾರಾದರೂ ಬರಬಹುದೆಂದು ಹೇಳಿದ್ದಾರೆ. ಯಾರು ಬೇಕಾದರೂ ಸಿ. ಎಫ್. ಡಿಗೆ ಹೋಗಬಹುದು. ಅದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ಪ್ರಜಾಪ್ರಭುತ್ವದಲ್ಲಿ ಈ ಕಡೆ ಸದಸ್ಯರು ಆ ಕಡೆ ಹೋಗುತ್ತಾರೆ. ಆ ಕಡೆ ಸದಸ್ಯರು ಈ ಕಡೆ ಹೋಗುತ್ತಾರೆ. ಆದರೆ ಸಭೆಯಲ್ಲಿ ಮಾತನಾಡಿದರಷ್ಟೇ ಸಾಲದು ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಈಗ ಜೀವಂತ ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಕೆಲಸ ಮಾಡುತ್ತಾ ಇದೆ. ಹೀಗೆ ಕೆಲಸ ಮಾಡುತ್ತಿರುವುದು ಸುಳ್ಳೋ ನಿಜವೋ ಹೇಳುವುದಕ್ಕೆ ಬರುವುದಿಲ್ಲ. ಆದರೆ ನಾವು ಹೇಳಿದ ಮೇಲೆ ಅದರ ಪ್ರಕಾರ ಕೆಲಸ ಮಾಡುವುದಕ್ಕೆ ಸ್ವಲ್ಪ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಹೋಗಿಬಿಟ್ಟರೆ ನಮ್ಮ ದೇಶದ ಗತಿ ಏನು ಎಂಬುದೇ ನನ್ನ ವಾದವಾಗಿದೆ. ಇದಕ್ಕೆ ಕಾನ್‌ಸ್ಟಿಟ್ಯೂಷನ್‌ನಲ್ಲಿ ಸಾಕಷ್ಟು ಆಧಾರ ಸಿಕ್ಕುತ್ತದೆಯೋ ಇಲ್ಲವೋ ಎಂಬ ಅಪನಂಬಿಕೆ ಬಂದಾಗ ನೀವು ಈ ರೀತಿ ಡಿಫೆಕ್ಷನ್‌ಗೆ ಡೋರ್ಸ್ ಓಪನ್ ಆಗಿದೆ ಎಂಬ ಸ್ಟೇಟ್‌ಮೆಂಟ್ ಕೊಡುವುದಾದರೆ ನೀವು ಮಾಡಿರತಕ್ಕ ಸ್ಟೇಟ್‌ಮೆಂಟನ್ನು ನಂಬಬಾರದು ಎಂದು ನಮ್ಮ ದೇಶದ ಜನ ತಿಳಿದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬಾರದು. ಇದರಿಂದ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಬುದ್ಧಿವಾದವನ್ನು ನೀವು ವಿರೋಧಪಕ್ಷದ ಸ್ಥಾನಕ್ಕೆ ಬಂದ ಮೇಲೆ ಹೇಳಿ,

ಶ್ರೀ ಎಂ. ವೈ ಘೋರ್ಪಡೆ.—ಈಗ ಕಾಂಗ್ರೆಸ್ ಪಕ್ಷ ಏನಾದರೂ ವಿರೋಧಪಕ್ಷದಲ್ಲಿದ್ದರೆ ಅಲ್ಲಿರಬಾರದು ಅಂತ ಅಲ್ಲ, ಕೇಂದ್ರದಲ್ಲಿ ಕಾಂಗ್ರೆಸ್ ವಿರೋಧಪಕ್ಷದಲ್ಲಿದೆ. ಈ ಒಂದು ಉತ್ತಮವಾದ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಅಲ್ಲಿ ನಾವು ವಿರೋಧ ಪಕ್ಷದವರಾದರೂ ನಮ್ಮ ನಮ್ಮ ಸ್ಥಾನದಿಂದ ಯಾವ ಮಟ್ಟದಲ್ಲಿ ನಾವು ಕೆಲಸವನ್ನು ಮಾಡುತ್ತೇವೆಯೋ ಅದು ಮುಖ್ಯವಾದ್ದದ್ದು. ಅವರ ಮೇಲೆ ಈ ಪ್ರಜಾಪ್ರಭುತ್ವದ ಭವಿಷ್ಯ ಅವಲಂಬಿಸಿಕೊಂಡಿದೆ. ಅದಕ್ಕೆ ನಾನು ಹೇಳುತ್ತಿದ್ದೇನೆ ನಾವು ಚುನಾವಣೆಗೆ ಹೆದರುತ್ತೇವೆ ಅಂತ ಅಲ್ಲ, ಕರ್ನಾಟಕ ರಾಜ್ಯದಲ್ಲಿ ನಾವು ಈ ಚುನಾವಣೆಗೆ ಹೆದರುವುದಕ್ಕೆ ಅವಕಾಶವಿಲ್ಲ. ಕರ್ನಾಟಕದಲ್ಲಿ ಚುನಾವಣೆಗೆ ನೀವು ಹೆದರಬೇಕೇ ಹೊರತು ನಾವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಸಮಯದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಮುಖ ತೋರಿಸಿ ಆರಿಸಿಬಂದವರು ನೀವು ಇನ್ನು ಮುಂದೆ ಆ ರೀತಿ ಆರಿಸಿ ಬರುವುದಕ್ಕಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಬಹುಶಃ ಕರ್ನಾಟಕ ರಾಜ್ಯದಲ್ಲಿ ಚುನಾವಣೆಗೆ ಹೆದರಿ ಈ ನಮ್ಮ ರಾಜ್ಯವನ್ನು ಆ 9 ರಾಜ್ಯಗಳ ಪಟ್ಟಿಯಲ್ಲಿ ಸೇರಿಸಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಆ 9 ರಾಜ್ಯಗಳ ಪಟ್ಟಿಯೊಳಗೆ ನಮ್ಮ ರಾಜ್ಯವನ್ನು ಸೇರಿಸಿಲ್ಲ. ಮಹಾರಾಷ್ಟ್ರವನ್ನೂ ಸೇರಿಸಿಲ್ಲ. ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯಬೇಕು ಎಂಬ ಒಂದೇ ಉದ್ದೇಶದಿಂದ ಈಗ 9 ರಾಜ್ಯಗಳನ್ನು ಮಾತ್ರ ಆರಿಸಿಕೊಂಡಿದ್ದಾರೆ,

ಶ್ರೀ ಎಂ. ವೈ ಘೋರ್ಪಡೆ.—ಅದಕ್ಕೆ ನಾನು ಹೇಳುವುದು ಕರ್ನಾಟಕದಲ್ಲಿ ನಮಗೆ ಚುನಾವಣೆಯ ಭಯವಿಲ್ಲ.

SRI KAGODU THIMMAPPA.—Madam Speaker, he is going beyond the point.

SRI M. Y. GHORPADE.—I am replying to every point raised. I am not inventing any point.

SRI KAGODU THIMMAPPA.—You are creating new traditions.

SRI M. Y. GHORPADE.—I am bound to reply politically to what you have said why are you afraid of what I am saying? I am after all, an ordinary simple human being. ನನಗೂ ಮಾತನಾಡುವುದಕ್ಕೆ ಅಧಿಕಾರವಿದೆ. ನೀವು ಅದಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಡಬೇಕಾದ್ದು ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ನಮಗೆ ಅನಾಥ ಬಾಲಕನ ಕಥೆ ನೆನಪಿಗೆ ಬರುತ್ತಾ ಇದೆ !

ಶ್ರೀ ಎಂ. ವೈ. ಘೋರ್ಪಡೆ.—ನಾವು ಚುನಾವಣೆಗೆ ಹೆದರುವುದಿಲ್ಲ. ಆದರೆ ಚುನಾವಣೆ ಮಾಡುವಾಗ ಕಾನೂನು ಪ್ರಕಾರವಾಗಿ ಸರಿಯಾದ ವಿಧಾನದಿಂದ ಚುನಾವಣೆ ಮಾಡಬೇಕು. ಇದರಲ್ಲಿ ಕಾನೂನಿಗೆ ಆಸ್ಪದ ಇಲ್ಲವೆಂದು ಹೇಳಿ ಸುಮ್ಮನೆ ಚುನಾವಣೆ ಮಾಡುವುದಾದರೆ ಪ್ರಜಾ ಪ್ರಭುತ್ವದ ನೀತಿ ನಿಯಮಗಳಿಗೆ ಧಕ್ಕೆ ತಂದಂತಾಗುತ್ತದೆ. ನಮಗೆ ಹೆದರಿಕೆ ಇದೆ ಅಂತ ಅಲ್ಲ. ಚುನಾವಣೆಯನ್ನು ಮುಂದಕ್ಕೆ ಹಾಕಿದರೆ ಏನು ಮಾಡುತ್ತಾರೋ ಎಂಬ ಭಯ ನಿಮ್ಮಲ್ಲಿ ಇರುವುದರಿಂದ ಚುನಾವಣೆಗೆ ಅವಸರ ಮಾಡುತ್ತಿದ್ದೀರಿ. ಅಲ್ಲಿ ಪ್ರೆಸಿಡೆಂಟ್ ಎಲೆಕ್ಷನ್‌ಗೆ ಅವಸರ ಮಾಡುತ್ತಿದ್ದಾರೆ. ಅಲ್ಲಿ ಕಾಂಗ್ರೆಸ್ ಪಕ್ಷ ವಿರೋಧಪಕ್ಷವಾಗಿ ಕೂತು ಯಾರು ಪ್ರೆಸಿಡೆಂಟ್ ಆಗಬೇಕೆಂಬುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಅಲ್ಲಿ 9 ರಾಜ್ಯಗಳ ಅಧಿಕಾರವನ್ನು ಅನ್‌ಕಾನ್‌ಸ್ಟಿಟ್ಯೂಷನಲ್ ಆಗಿ ತೆಗೆಯುವುದಕ್ಕೆ ಹೊರಟಿರುವುದು ನ್ಯಾಯವಲ್ಲ. ಅಲ್ಲಿ ನಾವು ನಿಮ್ಮನ್ನು ಸೋಲಿಸಿದೆವು ಎಂದು ಹೇಳತಕ್ಕಂಥಾದ್ದು ಕೇವಲ ಭ್ರಮೆ ಅಷ್ಟೆ. ನೀವು ನಮ್ಮನ್ನು ಸೋಲಿಸಲಿಲ್ಲ. ನಮ್ಮ ಕಾರ್ಯಕ್ರಮಗಳು, ಅದರಲ್ಲಿ ವಿಶೇಷವಾಗಿ ಈ ಫ್ಯಾಮಿಲಿ ಪ್ಲಾನಿಂಗ್ ಕಾರ್ಯಕ್ರಮ ನಮ್ಮನ್ನು ಸೋಲಿಸಿವೆ. ಆದ್ದರಿಂದ ನೀವು ನಮ್ಮನ್ನು ಸೋಲಿಸಿಲ್ಲ. ಕಾಂಗ್ರೆಸ್ಸಿನ ಮೂಲಭೂತವಾದ ಕಾರ್ಯಕ್ರಮಗಳಿಗೆ ವಿರೋಧಿಗಳಾದ ಜನ ಓಟು ಹಾಕಿಲ್ಲ. ಅವರ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಆದ ಕಾರಣ ಈ ಕಾಂಗ್ರೆಸ್ ಸಿದ್ಧಾಂತವನ್ನು ಸೋಲಿಸಿದ್ದೇವೆ, ಜನತಾ ಪಕ್ಷಕ್ಕೆ ಓಟು ಹಾಕಿದ್ದೇವೆ ಎಂದು ಹೇಳುವುದಾದರೆ ಅದು ಸರಿಯಾದ ರಾಜಕೀಯ ತಿಳುವಳಿಕೆ ಅಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇನ್ನು ಮುಖ್ಯವಾಗಿ ಈ ಬೆಲೆಗಳು ಏರಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಎಸ್ಸೆನ್ಷಿಯಲ್ ಕಮೊಡಿಟೀಸ್‌ಗಳ ಬೆಲೆಗಳು ಜಾಸ್ತಿಯಾಗುವುದಕ್ಕೆ ಆಸ್ಪದವನ್ನು ಕೊಟ್ಟಿಲ್ಲ ಎಂದು ಹೇಳುತ್ತೇನೆ. ಅಕ್ಕಿ, ರಾಗಿ, ಜವಾರ್ ಇವುಗಳ ಬಗ್ಗೆ I will give you some figures. Prices have not gone out of control. ಅಕ್ಕಿಯ ಬೆಲೆ 1974ರ ಸೆಪ್ಟೆಂಬರ್‌ನಲ್ಲಿ 2 ರೂ. 98 ಪೈಸೆ ಇದ್ದರೆ ಇದು 1976ನೇ ಇಸವಿ ಮಾರ್ಚ್‌ನಲ್ಲಿ ಅಂದರೆ ಹೋದ ವರ್ಷ ಬಜೆಟನ್ನು ಮಂಡಿಸಿದಾಗ 2ರೂ. 12ಪೈಸೆ ಇತ್ತು. ಈಗ ಇದರ ಬೆಲೆ 2ರೂ. 35ಪೈಸೆ ಇದೆ. ಇದೇ ರೀತಿ ಕೋರ್ಸ್ ರೈಸ್ 1976ನೇ ಇಸವಿ ಮಾರ್ಚ್‌ನಲ್ಲಿ 1ರೂ, 90ಪೈಸೆ ಇದ್ದದ್ದು ಈಗ 2ರೂ, 06ಪೈಸೆ ಆಗಿದೆ. ಇದು ಸ್ವಲ್ಪ ಜಾಸ್ತಿಯಾಗಿದೆ. ಇನ್ನು ರಾಗಿಯ ಬೆಲೆ ಸೆಪ್ಟೆಂಬರ್ 1974ರಲ್ಲಿ 1ರೂ. 88ಪೈಸೆ ಇದ್ದದ್ದು, ಹೋದವರ್ಷ ಮಾರ್ಚ್‌ನಲ್ಲಿ 1ರೂ, 10ಪೈಸೆಕ್ಕೆ ಇಳಿಯಿತು. ಈಗ ಇದರ ಬೆಲೆ 1ರೂಪಾಯಿ 20-30 ಪೈಸೆಯಾಗಿದೆ, ಇನ್ನು ಜವಾರ್ ಬೆಲೆ 1974ರ ಸೆಪ್ಟೆಂಬರ್‌ನಲ್ಲಿ 2ರೂ. 70ಪೈಸೆ ಇದ್ದದ್ದು, 1976ನೇ ಮಾರ್ಚ್‌ನಲ್ಲಿ 1ರೂ. 37ಪೈಸೆಗೆ ಇಳಿಯಿತು. ಈಗ ಇದರ ಬೆಲೆ 1ರೂ, 10-20 ಪೈಸೆ ಇದೆ.

ಶ್ರೀ ಎ. ಎನ್. ಪಾಟೀಲ್ —ಇದರ ಬೆಲೆ ಜನತಾ ಬಜಾರ್‌ನಲ್ಲಿ 1ರೂ. 68ಪೈಸೆ ಇದೆ.

ಶ್ರೀ ಎಂ, ವೈ. ಘೋರ್ಪಡೆ.—ಜನತಾ ಬಜಾರ್‌ನಲ್ಲಿ ಆ ರೀತಿ ಇರಬಹುದು. ಇನ್ನು ಗ್ರೌಂಡ್‌ನಟ್ ಆಯಿಲ್ ಬೆಲೆ ಜಾಸ್ತಿಯಾಗಿದೆಯೆಂದು ನಾನು ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. 1974ರ ಸೆಪ್ಟೆಂಬರ್‌ನಲ್ಲಿ ಇದರ ಬೆಲೆ 8ರೂ. 20 ಪೈಸೆ ಇದ್ದದ್ದು ಹೋದವರ್ಷ ಮಾರ್ಚ್‌ನಲ್ಲಿ 1ರೂ. 4 ಪೈಸೆಕ್ಕೆ ಇಳಿಯಿತು. ಈಗ ಪುನಃ ಇದರ ಬೆಲೆ 8ರೂಪಾಯಿ ಆಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಈ ಬೆಲೆಗಳ ಬಗ್ಗೆ ಎಷ್ಟು ಸಾಧ್ಯವೋ ಅಷ್ಟನ್ನು ನಾವು ಮಾಡಿದ್ದೇವೆ, ಇವತ್ತು ಒಟ್ಟಿನಲ್ಲಿ ಹೇಳುವುದಾದರೆ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಅದನ್ನು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಉಪಯೋಗಿಸುವುದಕ್ಕೆ ಸಾಧ್ಯವೋ ಅದನ್ನು ಮಾಡಿದ್ದೇವೆ. ಆದರ ಇವತ್ತು ಬೆಲೆಗಳು ಬರೀ ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲ, ಅಥವಾ ಅದರ ಹತೋಟಿಯಲ್ಲೇ ಸಂಪೂರ್ಣವಾಗಿ ಇರುತ್ತದೆ ಎಂದು ಹೇಳುವ ಹಾಗಿಲ್ಲ. ರಾಷ್ಟ್ರೀಯ ಪರಿಸ್ಥಿತಿ ಮೇಲೆ ಅವಲಂಬಿಸಿರುತ್ತದೆ. ಇತ್ತೀಚೆಗೆ ಇಡೀ ರಾಷ್ಟ್ರದಲ್ಲೇ ಅಲ್ಲದೆ ಕರ್ನಾಟಕದಲ್ಲೂ ಕೂಡ ಪುನಃ ಬೆಲೆಗಳು ಜಾಸ್ತಿಯಾಗುವುದಕ್ಕೆ ಪ್ರಾರಂಭವಾಗಿದೆ. ಇದಕ್ಕೆ ಕಾರಣ ಯಾರು ! ಯಾರು ಇದಕ್ಕೆ ಜವಾಬ್ದಾರರು ? ಮೊನ್ನೆ ಇಲ್ಲಸ್ಟ್ರೇಟೆಡ್ ವೀಕ್ಲಿಯಲ್ಲಿ ಪಾಲ್ಕಿವಾಲಾ ಅವರ ಲೇಖನ ಪ್ರಿಂಟ್ ಆಗಿದೆ. ಅವರು ಪ್ರಧಾನಮಂತ್ರಿಯವರಿಗೆ ಬಹಿರಂಗವಾಗಿ ಪತ್ರ ಬರೆದಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ 'An index to the revival of smuggling is

provided by the fact that whereas during the last twelve months there was no depreciated rate for the rupee against foreign currencies in the free market, within a week of the election results a black-market sprang into existence. For instance, whereas at the beginning of the last month the Singapore dollar fetched Rs. 3.45 (the official rate) in the free market, now the Singapore dollar quotes at Rs. 4.50. The remittances from Singapore and Mallasia to India through the official banking channels have now dwindled to just a trickle.' ಇದು ಬಹಳ ಡ್ಯಾಮೇಜಿಂಗ್ ಸ್ಟೇಟ್‌ಮೆಂಟ್. ಪಾಲ್ಕಿವಾಲಾ ಅವರೇನೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಲ್ಲ. ನಿಮ್ಮ ಪಕ್ಷದಲ್ಲೇ ಇದ್ದಾರೆ. ಅವರು ಈ ರೀತಿ ಪ್ರಧಾನಮಂತ್ರಿಯವರಿಗೆ ಬಹಿರಂಗವಾಗಿ ಬರೆದಿದ್ದಾರೆ. ಇದು ನಾನು ರಾಜಕೀಯವಾಗಿ ಹೇಳುವ ಮಾತಲ್ಲ, ಅಥವಾ ಪಕ್ಷದ ಹೋರಾಟದಿಂದ ಹೇಳುವ ಮಾತಲ್ಲ ಎಂಬುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಚಂದ್ರಶೇಖರ್, ಮೋಹನ್‌ಧಾರಿಯಾ ಅವರು ಹೇಳಿದಾಗ ತಾವು ಏನು ಹೇಳಿದಿರಿ ?

2–00 ಪಿ. ಎಂ.

ಶ್ರೀ ಎಂ. ವೈ. ಘೋರ್ಪಡೆ.—ಪ್ರಧಾನಮಂತ್ರಿಯವರು ಸ್ವತಃ ಒಪ್ಪಿದ್ದಾರೆ.

The Prime Minister himself admitted in broadcast "In the last two weeks there was an increase in the prices of certain commodities like oil seeds, oils cotton, tea, pulses which are the basic needs of the people. "As every one knows both the Khariff and rabi crops have been satisfactory and there is no reason why there should be any rise in the prices of foodgrains. As regards other commodities, in some cases shortages may arise but shortages cannot be used as a convenient device to push up prices Thus even if there is shortage, the stockists and traders have to play fair with the community and cannot exploit it for their selfish purpose." The Prime Minister expressed strong disapproval of the behaviour of the trading community and said, 'the Traders instead of seeing that prices decline, artificially create circumstances which generate a trend towards rise. And to add to this situation, the stockists without stocks in order to profiteer at the expense of the community Such conduct amounts to a gross breach of social obligation and national duty.' 'We are convinced that the main responsibility for playing with the prices of essential commodities lies with the traders and stockists. It is their bounden duty and obligation to so arrange the distribution and sale of commodities that no local shortage is created and that prices decline rather than rise ' ಬಹಳ ಸ್ಪಷ್ಟವಾದ ಮಾತು, ಧೈರ್ಯವಾದ ಮಾತು ಅದು, ನನ್ನ ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. Action taken at the National level against hoarders, smugglers and blackmarketeers was mainly responsible for the sobering effect on the price levels ಎಂಬ ಮಾತನ್ನು ಇದಕ್ಕೋಸ್ಕರ ಬಜೆಟ್ ಭಾಷಣದಲ್ಲಿ ಸೇರಿಸಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ —ಹಾಜಿ ಮಸ್ತಾನ್ ಮತ್ತಿತರನ್ನು ತಮಗೆ ಗೊತ್ತಿರುವ ಹಾಗೆ ರಿಲೀಸ್ ಮಾಡಿದ್ದಾರೆ. ಅವರನ್ನೆಲ್ಲಾ ಜಯಪ್ರಕಾಶ್‌ನಾರಾಯಣ್ ಅವರು ಅಪ್ರೋಚ್ ಮಾಡಿ ಇನ್ನು ಮುಂದೆ ಒಳ್ಳೆ ಕಾರ್ಯ ಮಾಡಿ ಎಂದು ಹೇಳಿದ್ದಾರೆ ಅದರಿಂದಾಗಿ ಬೆಲೆಗಳು ಮತ್ತು ಕಳ್ಳಸಾಗಾಣಿಕೆ ಕಡಿಮೆಯಾಗಬಹುದು ಎಂದು ಅನ್ನಿಸುತ್ತದೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ —ಇಲ್ಲಾ ಬರೀ ಭಾಷಣ ಮಾಡುವುದರಿಂದ ಆಗುವುದಿಲ್ಲ. ಪ್ರೈಮಿನಿಸ್ಟರ್ ಅವರೂ ಕೆಲವು ಮಾತುಗಳನ್ನು ಹೇಳಿದ್ದರು. ಪರಿಣಾಮ ಏನಾಗಿದೆ ಎಂದರೆ ಮೊನ್ನೆ. ಪ್ರೈಮಿನಿಸ್ಟರ್ ಮುರಾರ್ಜಿ ದೇಸಾಯಿ ಅವರು ದೇಶದಲ್ಲಿ ಸಾಮಾನ್ಯವಾದಂಥ ಕಾನೂನು ಇದೆ, ಇರುವ ಕಾನೂನನ್ನೇ ಉಪಯೋಗಿಸಿ ನಮ್ಮ ದೇಶದಲ್ಲಿ ಶಿಸ್ತು ಮತ್ತು ಬೆಲೆಗಳನ್ನು ಹತೋಟಿಯಲ್ಲಿ ಇಡುವುದಕ್ಕೆ ಸಾಧ್ಯವಾಗದೇ ಇದ್ದರೆ ಅಧಿಕಾರದಲ್ಲಿ ನಾವು ಇರುವುದಕ್ಕೆ ಲಾಯಕ್ಕಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಈಗತಾನೇ ಅವರು ಅಧಿಕಾರಕ್ಕೆ ಬಂದಿದ್ದಾರೆ. ಏನು ಮಾಡುತ್ತಾರೋ ಕಾದು ನೋಡೋಣ. ಎಷ್ಟರಮಟ್ಟಿಗೆ ಅವರು ಅಧಿಕಾರದಲ್ಲಿರುವುದಕ್ಕೆ ಲಾಯಕ್ಕಿದ್ದಾರೆ ಎಂಬುದನ್ನು ಕಾದು ನೋಡೋಣ. ನಾನು ಈ ಸರ್ಕಾರದ ವತಿಯಿಂದ ಒಂದು ಮಾತನ್ನು ಹೇಳುತ್ತಿದ್ದೇನೆ ಕೇಂದ್ರ ಸರ್ಕಾರದವರು ಇದರ ಬಗ್ಗೆ ಏನಾದರೂ ಧೈರ್ಯವಾದ ಕಾರ್ಯಕ್ರಮ ಹಾಕಿ ರಾಷ್ಟ್ರೀಯ ಯೋಜನೆ ಮಾಡುವುದಾದರೆ, ಬೆಲೆಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವುದಕ್ಕೆ, ಬಡಜನರಿಗೆ ಅಗತ್ಯವಾದ ವಸ್ತುಗಳ ಹಂಚಿಕೆ ಮಾಡುವುದಕ್ಕೆ ಪ್ರಯತ್ನಿಸುವುದಾದರೆ ಆ ಕಾರ್ಯಕ್ರಮಕ್ಕೆ ನಮ್ಮ ಈ ಸರ್ಕಾರ ಸಂಪೂರ್ಣವಾದ ಸಹಕಾರ ಕೊಡುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಥ್ಯಾಂಕ್ ಯು.

ಶ್ರೀ ಎಂ. ವೈ. ಘೋರ್ಪಡೆ.—ನಾವೇನಾದರೂ ಒಳ್ಳೆಯ ಕೆಲಸ ಮಾಡಿದರೆ ನೀವೂ ಕೂಡ ಅದೇ ರೀತಿ ಸಹಕಾರ ಕೊಡಬೇಕು. ಈಗಾಗಲೇ ಈ ಬಗ್ಗೆ ಕರ್ನಾಟಕದಲ್ಲಿ ಯೋಜನೆ ಮಾಡಿದ್ದೇವೆ. ಗ್ರೌಂಡ್‌ನಟ್ ಆಯಿಲ್ ಬಗ್ಗೆ ಹೇಳುವುದಾದರೆ ಕನ್‌ಸ್ಯೂಮರ್ಸ್‌ಗೆ ಅನುಕೂಲವಾಗುವ ರೀತಿಯಲ್ಲಿ ಹಳ್ಳಿಹಳ್ಳಿಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಉತ್ಪಾದನಾ ಘಟಕಗಳನ್ನು ಸ್ಥಾಪನೆ ಮಾಡದೇ ಹೋದರೆ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಕಷ್ಟವಾಗುತ್ತದೆಂದು ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ರಾಷ್ಟ್ರಮಟ್ಟದಲ್ಲಿ ಆ ದೆಸೆಯಲ್ಲಿ ಯೋಜನೆ ಹಾಕುವುದಾದರೆ ಈ ಸರ್ಕಾರ ಅದಕ್ಕೆ ಸಹಕಾರ ಕೊಡುತ್ತದೆ. ನೀವೂ (ವಿರೋಧಪಕ್ಷ) ಕೂಡ ನಿಮ್ಮ ಪ ದ ಮೇಲೆ ಒತ್ತಾಯ ತರಬೇಕು. ಕರ್ನಾಟಕದಲ್ಲಿ ಈ ರೀತಿ ಹೇಳಿದ್ದಾರೆ ಈ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಕೇಳಬೇಕು. ಸುಮ್ಮನೆ ರಾಜಕೀಯವಾಗಿ ಟೀಕೆ ಮಾಡುವುದಕ್ಕೆ ಎಷ್ಟು ಸಾಧ್ಯವೋ ಅಷ್ಟೇ ಮಾಡುತ್ತೀರೇ ಹೊರತು ರಚನಾತ್ಮಕವಾದ ಪ್ರಶ್ನೆ ಬಂದಾಗ ಅವರ ಬಗ್ಗೆ ಯಾರೂ ಪ್ರಸ್ತಾಪ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಕೊಟ್ಟಿರುವ ಬೇರೆ ರಚನಾತ್ಮಕ ಸಲಹೆಗಳ ಬಗ್ಗೆ ತಾವು ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದೀರಿ ಎಂಬುದನ್ನು ನೋಡಿದ್ದೇವೆ.

ಶ್ರೀ ಎಂ. ವೈ. ಘೋರ್ಪಡೆ.—ಕಡಲೇಕಾಯಿ ಎಣ್ಣೆ ಬೆಲೆಯನ್ನು ಇಳಿಸುವುದಕ್ಕಾಗಿ ಸಣ್ಣ ಸಣ್ಣ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ಹೋದರೆ ದೊಡ್ಡ ಎಕ್ಸ್‌ಪ್ಲಾಯಿಟರ್ಸ್ ಸುಮ್ಮನೆ ಇರುವುದಿಲ್ಲ, ಅವರೇ ನಿಮ್ಮ ಪಕ್ಷಕ್ಕೆ ಬೆಂಬಲ ಕೊಟ್ಟವರು,

ಶ್ರೀ ಕಾಗೋಡು ತಿಮ್ಮಪ್ಪ.—ಕೃಷ್ಣ ಫ್ಲೋರ್ ಮಿಲ್‌ನವರು, ಘೋರ್ಪಡೆ ಅವರು ಯಾರಿಗೆ ಬೆಂಬಲ ಕೊಟ್ಟಿದ್ದರು.

ಶ್ರೀ ಎಂ. ವೈ. ಘೋರ್ಪಡೆ.—ಇದು ದೊಡ್ಡ ಯೂನಿಟ್. ಸಣ್ಣ ಯೂನಿಟ್‌ಗಳಲ್ಲಿ......

ಶ್ರೀ ಎಸ್. ಬಂಗಾರಪ್ಪ.—ಘೋರ್ಪಡೆ ಅವರು, ಕೃಷ್ಣ ಫ್ಲೋರ್ ಮಿಲ್‌ನವರು ಒಬ್ಬರಿಗೆ ಮಾತ್ರವಲ್ಲ, ವೀರೇಂದ್ರಪಾಟೀಲರು, ನಿಜಲಿಂಗಪ್ಪನವರಿಗೂ ಬೆಂಬಲ ಕೊಡದೇ ಬಿಟ್ಟಿಲ್ಲ.

ಅಧ್ಯಕ್ಷರು.— ಈ ವಿಷಯಗಳನ್ನೆಲ್ಲಾ ಹೊರಗಡೆ ಮಾತನಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಸ್ಮಾಲ್ ಯೂನಿಟ್‌ಗಳಿಗೆ ಸ್ಥಾಪನೆ ಮಾಡುವುದಕ್ಕೆ ಅವಕಾಶ ಕೊಟ್ಟಾಗ ದೊಡ್ಡ ಯೂನಿಟ್‌ಗಳಲ್ಲಿ ಲಾಭ ಮಾಡತಕ್ಕ ಜನ ಏನು ಮಾಡುತ್ತಾರೆ ಎಂಬುದನ್ನು ನೋಡಬೇಕು. ನಮಗಿಂತ ನಿಮ್ಮ ಮೇಲೆ ಅವರ ಒತ್ತಡ ಜಾಸ್ತಿ ಇದೆ. ಶ್ರೀಮಾನ್ ಮೋಹನ್ ಧಾರಿಯಾ ಅವರು ನನಗೆ ಚೆನ್ನಾಗಿ ಗೊತ್ತು. ಪ್ಲಾನಿಂಗ್ ಕಮಿಷನ್‌ನಲ್ಲಿದ್ದಾಗ ನಾನು ಅವರು ಸಾಕಷ್ಟು ಚರ್ಚೆ ಮಾಡಿದ್ದೇವೆ. ಅವರು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡಿದ್ದಾರೆ ಅವರು ನನ್ನ ಸ್ನೇಹಿತರು.

ಶ್ರೀ ಕೋಣಂದೂರು ಲಿಂಗಪ್ಪ.—ಅದಕ್ಕೆ ಜೈಲಿನಲ್ಲಿ ಹಾಕಿದ್ದಿದ್ದು.

ಶ್ರೀ ಎಂ. ವೈ. ಘೋರ್ಪಡೆ.—ಅವರಿಗೆ ಈ ಬಗ್ಗೆ ಆಸಕ್ತಿ ಇದೆ. ಇದೆಲ್ಲರ ರಾಜಕೀಯವಾಗಿ ಮಾಡುವಂತಹುದಲ್ಲ. ಎಂಪ್ಲಾಯ್‌ಮೆಂಟ್ ಬಗ್ಗೆ, ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಂ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇನೆ. ಅವರಿಗೆ ಮುರಾರ್ಜಿ ಅವರು ಸುದೈವದಿಂದ ಒಳ್ಳೆಯ ಖಾತೆಯನ್ನೇ ಕೊಟ್ಟಿದ್ದಾರೆ.

ಅವರು ಏನಾದರೂ ಅಂಥ ಒಂದು ದಿಟ್ಟ ಹೆಜ್ಜೆಯನ್ನಿಟ್ಟು ಇದನ್ನು ಯಶಸ್ವಿ ಮಾಡುವ ಸಲುವಾಗಿ ಒಂದು ಕಾರ್ಯಕ್ರಮವನ್ನು ಹಾಕುವುದಾದರೆ ಕೇವಲ ರಾಜ್ಯಮಟ್ಟದಲ್ಲಿ ಮಾಡಿದರೆ ಸಾಕಾಗುವುದಿಲ್ಲ. ರಾಷ್ಟ್ರೀಯ ಮಟ್ಟದಲ್ಲೇ ಆಗಬೇಕು, ನಾವು ಸಹ ಆ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರ ಕೊಡುತ್ತೇವೆ. ಆ ಬಗ್ಗೆ ಏನು ಅನುಮಾನ ಇಲ್ಲ. ಒಟ್ಟಿನಲ್ಲಿ ಇವತ್ತು ಆ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಅದು ನಿಮ್ಮಿಂದಲೇ ಪರಿಹಾರವಾಗಬೇಕೆಂಬ ದುರಹಂಕಾರ ನಮಗೆ ಇಲ್ಲ. ನಮಗಿಂತಲೂ ಉತ್ತಮ ರೀತಿಯಲ್ಲಿ ನೀವು ಮಾಡುವುದಾದರೆ ಬಹಳ ಸಂತೋಷ. ಒಟ್ಟಿನಲ್ಲಿ ಯಾರೇ ಮಾಡಲಿ, ಆ ಕಾರ್ಯಕ್ರಮ ಯಶಸ್ವಿಯಾಗಬೇಕೆಂಬುದು ಮುಖ್ಯ.

ಒಬ್ಬ ಸದಸ್ಯರು.—ಅಂತ ಸದ್ಬುದ್ಧಿ ಈ ಕಾಲಕ್ಕಾದರು ಬಂತಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಅದಕ್ಕೆ ನಾವು ಹೇಳುವುದು ನಮ್ಮ ದೇಶಕ್ಕೆ ಸರಿಯಾದಂತಹ ಧೋರಣೆ, ರಾಜಕೀಯ ನೀತಿ ಏನೆಂದರೆ "ಲೆಫ್ಟ್ ಆಫ್ ದಿ ಸೆಂಟರ್ ಎಂಬುದು" ಅದನ್ನು ಮಾತ್ರ ಈ ದೇಶದಲ್ಲಿ ಮಾಡುವುದಕ್ಕೆ ಸಾಧ್ಯ. ಇದೇ ಜವಹರ್‌ಲಾಲ್ ನೆಹರೂರವರ ನೀತಿ.

ಒಬ್ಬ ಸದಸ್ಯರು.—11 ವರ್ಷದಲ್ಲಿ ಹೇಳದಿರುವ ಹೆಸರನ್ನು ಇವತ್ತು ಹೇಳಿದರಲ್ಲ. ಸ್ವಾಮಿ.

ಶ್ರೀ ಎಂ. ವೈ. ಘೋರ್ಪಡೆ.—ಇದನ್ನೆಲ್ಲ ಮಾಡಬೇಕಾದರೆ ಲೆಫ್ಟ್ ಆಫ್ ದಿ ಸೆಂಟರ್ ಪಾಲಿಸಿಯನ್ನು ಒಪ್ಪಬೇಕಾಗುತ್ತದೆ. ಇಂಥ ಒಂದು ರಾಜಕೀಯ ಬವರಾವಣೆಯಾಗುವುದಾದರೆ ಒಳ್ಳೆಯದು. ಆಗ ದಕ್ಷಿಣ ಭಾರತದಲ್ಲಿ ಸರಿಯಾದ ಪಾತ್ರ ವಹಿಸುವುದಕ್ಕೆ ಸಾಧ್ಯವಾಗುತ್ತದೆ, ಮತ್ತು ನಮ್ಮ ದೇಶದ ಪ್ರಜಾ ಪ್ರಭುತ್ವವನ್ನು ಪಾಲಿಸುವುದಕ್ಕೆ ಅವಕಾಶ ದೊರೆತಂತಾಗುತ್ತದೆ. ಅದಕ್ಕೆ ನಾವು ಚುನಾವಣೆಗೆ ಹೆದರುವುದಿಲ್ಲ.

ಇನ್ನು ಕೆಲವು ಮಾನ್ಯ ಸದಸ್ಯರು ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳುವುದಿಲ್ಲವೆಂದು ಟೀಕೆ ಮಾಡಿದ್ದಾರೆ. ಸ್ಟ್ರಾಟಜಿ ಫಾರ್ ಫುಲ್ಲರ್ ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳಿ ಎಂದು ಕೇಳಿದ್ದಾರೆ. ಆ ಬಗ್ಗೆ ಹೋದ ವರ್ಷದ ಬಡ್ಜೆಟ್ ಭಾಷಣದಲ್ಲೇ ಪ್ರಸ್ತಾಪ ಮಾಡಿದ್ದೇನೆ. ಹಳ್ಳಿಯ ಮಟ್ಟದ ರೂರಲ್ ವರ್ಕ್ಸ್ ಪ್ರೋಗ್ರಾಂನಲ್ಲಿ ದೇಶದ ಜನತೆಗೆ ಬೃಹತ್ ಪ್ರಮಾಣದಲ್ಲಿ ಕೆಲಸಗಳನ್ನು ಕೊಡುವುದಕ್ಕೆ ಅವರಿಗೆ ಸರಿಯಾದಂತಹ ಟೆಕ್ನಾಲಜಿ, ಅಪ್ರೋಪ್ರಿಯೇಟ್ ಟೆಕ್ನಾಲಜಿ ಇಲ್ಲದೆ ಇರುವುದರಿಂದ ಕಷ್ಟವಾಗುತ್ತದೆಂಬುದನ್ನು ನನ್ನ ಬಡ್ಜೆಟ್ ಭಾಷಣದಲ್ಲಿ ಧೈರ್ಯವಾಗಿ ಸೇರಿಸಿದ್ದೇನೆ; ಮತ್ತು ಅದೇ ಮಾತನ್ನು ಇಲ್ಲಿಯೂ ಸಹ ಹೇಳುತ್ತಿದ್ದೇನೆ. ಬರೀ ಭಾಷಣ ಮಾಡಿದರೆ ಸಾಲದು ಅದನ್ನು ಕಾರ್ಯಗತ ಮಾಡಬೇಕಾದರೆ ಬಹಳ ಧೈರ್ಯ ಬೇಕಾಗುತ್ತದೆ. ಈಗ ಹಾಲಿ 3 ಲಕ್ಷ ಜನ ರೂರಲ್ ವರ್ಕ್ಸ್ ಪ್ರೋಗ್ರಾಂನಲ್ಲಿ ಕೆಲಸ ಮಾಡುತ್ತಿದ್ದಾರೆ. ಕಳೆದ ವರ್ಷ ಕ್ಷಾಮ ಬಂದಾಗ ಈಯೋಜನೆಯಲ್ಲಿ 9 ಲಕ್ಷ ಜನ ಕೆಲಸ ಮಾಡಿದರು. ಈ ಒಂದು ಯೋಜನೆಯನ್ನು ಪ್ರತಿಯೊಂದು ರಾಜ್ಯಗಳಲ್ಲಿಯೂ ಕೈಗೊಂಡಿದ್ದಾರೆ. ಸಾಧಾರಣವಾಗಿ ಯಾರಿಗೆ ದಿನಕ್ಕೆ ಕೊನೆ ಪಕ್ಷ 4-5 ರೂಪಾಯಿಗಳನ್ನಾದರೂ ದುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ ಅಂಥವರಿಗೆ ಯಾವುದಾದರೂ ಒಂದು ಕೆಲಸವನ್ನು ಕೊಡಿಸುತ್ತೇವೆಂದು ಶಕ್ತಿ ಮೀರಿ ಕೋಟಿ ಕೋಟಿ ರೂಪಾಯಿ ಹಣವನ್ನು ಈ ಯೋಜನೆಗೆ ಖರ್ಚು ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಗುಲ್ಬರ್ಗ ಮತ್ತಿತರ ಪ್ರದೇಶಗಳಲ್ಲಿ ಬರಗಾಲ ಬಂದಾಗ 50-100 ಎಕರೆ ಜಮೀನನ್ನು ಹೊಂದಿದ್ದವರೂ ಸಹ ಬೆಳೆ ಹೋದ ಕಾರಣ ಕೂಲಿ ಮಾಡಿ ಜೀವನ ನಡೆಸತಕ್ಕ ಕಾಲ ಬಂತು. ಆಗ ನಿಮ್ಮ ಆ ಕಾರ್ಯ ವ್ಯಾಪ್ತಿಯಲ್ಲಿ ಪ್ರತಿ ತಾಲ್ಲೂಕಿನಲ್ಲಿಯು ಎಷ್ಟೆಷ್ಟು ಕೆಲಸಗಳನ್ನು ಎಷ್ಟು ತಿಂಗಳುಗಳ ಕಾಲ ಕೊಟ್ಟಿರಿ ?

ಶ್ರೀ ಎಂ. ವೈ. ಘೋರ್ಪಡೆ.—ನಾವು ಬರಗಾಲ ಬಂದಾಗ ಏನೇನು ಕೆಲಸಗಳನ್ನು ಮಾಡಿದ್ದೇವೆಂಬುದನ್ನು ಹೇಳಿದ್ದೇನೆ. ಅದಕ್ಕಿಂತ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ನೀವು ಹೇಳುವುದನ್ನು ನಾನು ಒಪ್ಪುತ್ತೇನೆ. ಅಂಥ ನೀತಿ ನಮ್ಮ ದೇಶದಲ್ಲಿ ನಿಲ್ಲಬೇಕಾದರೆ ಆ ಬಗ್ಗೆ ರಾಷ್ಟ್ರೀಯ ಧೋರಣೆ ತಾಳಬೇಕಾಗುತ್ತದೆ. ಹಿಂದಿನ ಕೇಂದ್ರ ಸರ್ಕಾರದವರು ನಮ್ಮಲ್ಲಿ 18 ಮಿಲಿಯನ್ ಟನ್ ಫುಡ್ ಸ್ಟಾಕ್ ಇದೆಯೆಂದೂ, ಅದನ್ನು ನಿಮಗೆ ಉಚಿತವಾಗಿ ಕೊಡುತ್ತೇವೆಂದೂ ಮತ್ತು ಅದನ್ನು ರೂರಲ್ ಮೆಯಿಂಟೆನನ್ಸ್ ವರ್ಕ್ಸ್‌ಗೆ ಉಪಯೋಗಿಸಿ ನಿಮ್ಮ ಕಾರ್ಯಕ್ರಮದ ವ್ಯಾಪ್ತಿಯನ್ನು ಜಾಸ್ತಿ ಮಾಡಿಕೊಳ್ಳಿ ಎಂದು ಒಂದು ಪತ್ರವನ್ನು ಸಹ ಬರೆದು ತಿಳಿಸಿದ್ದರು. ಆದರೆ ಆ ಪತ್ರ ಅಲ್ಲಿಗೆ ಮುಗಿಯಿತು ಈಗಿನ ಸರ್ಕಾರದ ಧೋರಣೆ ಏನು ಇದೆಯೋ ಗೊತ್ತಿಲ್ಲ. ಆ ಕಾರ್ಯಕ್ರಮಕ್ಕೆ ನಮ್ಮ ಬಡ್ಜೆಟ್ ರಿಸೋರ್ಸಸ್ ಜೊತೆಗೆ ಅವರು ಸಹ ಸಾಕಷ್ಟು ಸಹಾಯ ಮಾಡಿದರೆ ಅದನ್ನು ಬೃಹತ್ ಪ್ರಮಾಣದಲ್ಲಿ ಬೆಳಸಿ ಸಾಕಷ್ಟು ಜನಕ್ಕೆ ಕೆಲಸ ಕೊಡಲಿಕ್ಕೆ ಸಾಧ್ಯವಾಗುತ್ತದೆ. ನಾನೇನಾದರು ಈ ಸಾರಿ ದೆಹಲಿಗೆ ಹೋದರೆ ಇದೇ ವಿಚಾರವನ್ನೇ ನಮ್ಮ ಮತ್ತು ಅವರ ನಾಯಕರುಗಳಿಗೂ ಸಹ ಹೇಳುತ್ತೇನೆ. ಭಾರತ ಸರ್ಕಾರದವರು, ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂಗೆ ಪ್ರೋತ್ಸಾಹ ನೀಡುವ ಸಲುವಾಗಿ ಉಚಿತ ಮೈಲೋ ಮತ್ತು ಗೋದಿಯನ್ನು ಒದಗಿಸುವುದಾಗಿ ಹೇಳಿದ್ದ ಬಗ್ಗೆ ಆಯವ್ಯಯ ಪತ್ರದ 10ನೇ ಪುಟದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅದೇನೆಂದರೆ :—

> "As a matter of fact, early this month the Government of India communicated to the State Government a scheme where additional quantities of wheat and milo would be made available free of cost in order to augment efforts of the State Government"

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಯಾವ ತಿಂಗಳಲ್ಲಿ ಬರೆದಿದ್ದಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಚುನಾವಣೆಗಿಂತ ಮುಂಚೆ ಬರೆದಿದ್ದರು. ಇದರ ಬಗ್ಗೆ ನಾವು ಕೇಂದ್ರದವರನ್ನು ಕೇಳಬೇಕಾಗಿದೆ. ನಾನು ಹೇಳುವುದೇನೆಂದರೆ ಈ ಬಗ್ಗೆ ಕೇಂದ್ರದ ಮೇಲೆ ಒತ್ತಾಯ ತರಬೇಕು. ನಾವು ತರುವುದು ಅಷ್ಟೇ ಅಲ್ಲ ನೀವು ಸಹ ತರಬೇಕು ಏಕೆಂದರೆ ನಿಮಗಿಂತ ನಮಗೆ ಹೆಚ್ಚಾಗಿ ಪ್ರಭಾವ ಇದೆಯೆಂದು ಹೇಳಿಕೊಳ್ಳುತ್ತಿದ್ದೀರಿ. ಅದಕ್ಕೋಸ್ಕರ ಈ ರೂರಲ್ ವರ್ಕ್ಸ್ ಪ್ರೋಗ್ರಾಂ ಬಗ್ಗೆ ನಿಮಗೇನಾದರು ನಿಜವಾಗಿ ಕಳಕಳಿ ಇದ್ದರೆ ಆ ಬಗ್ಗೆ ಒತ್ತಾಯ ತನ್ನಿ, ಅವರು ಅದನ್ನು ಮಾಡಲಿ. ಅವರೇನಾದರು ಈ ಕಾರ್ಯಕ್ರಮಕ್ಕೆ ಅವರಲ್ಲಿರುವ ಆಹಾರ ಪದಾರ್ಥಗಳ ಸಹಾಯವನ್ನು ನೀಡುವುದಾದರೆ ನಿಮ್ಮ ಜೊತೆಗೆ ನಾವು ಸೇರಿ ಒತ್ತಾಯ ತರೋಣ. ಅವರು ತಮ್ಮ ಹೊಸ ಆರ್ಥಿಕ ಧೋರಣೆಯಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನತೆಗೆ ಉದ್ಯೋಗಗಳನ್ನು ಒದಗಿಸಲು ನೆರವು ನೀಡಿದರೆ ಅದರ ಜೊತೆಗೆ ನಮ್ಮ ಬಡ್ಜಟ್ ರಿಸೋರ್ಸನ್ನು ಸೇರಿಸಿ ಆ ಕಾರ್ಯಕ್ರಮವನ್ನು ಬೃಹತ್ತಾಗಿ ಯಶಸ್ವಿಗೊಳಿಸುವುದಕ್ಕೆ ಅನುಕೂಲವಾಗುತ್ತದೆ. ಇವತ್ತು 3 ಸಾವಿರ ಕೋಟಿ ರೂಪಾಯಿ ಫಾರಿನ್ ಎಕ್ಸ್‌ಛೇಂಜ್ ಇದೆ. ಆದಕಾರಣ ನಮ್ಮ ದೇಶ ಯಾವ ಕಾಲಕ್ಕೆ ಆರ್ಥಿಕ ದೆಸೆಯಿಂದ ಮುಂದುವರೆಯುತ್ತದೆ. ಎಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ.

SRI KAGODU THIMMAPPA.—I want to know whether Government has formulated a scheme basing the village as a unit?

SRI M. Y. GHORPADE.—I request the Hon'ble Member not to fall a pray to these foreign expressions. ನಮ್ಮಲ್ಲಿರತಕ್ಕ ಜನ ನಿಮಗೂ ಗೊತ್ತು. ನಮಗೂ ಗೊತ್ತು ನಾವು ಎಲ್ಲೆಲ್ಲಿ ಕೆರೆಗಳನ್ನು ಕಟ್ಟಿಸುತ್ತಿದ್ದೇವೆ, ಒಡ್ಡುಗಳನ್ನು ಹಾಕಿಸುತ್ತಿದ್ದೇವೆ, ರಸ್ತೆಗಳನ್ನು ಮಾಡಿಸುತ್ತಿದ್ದೇವೆ. ಮತ್ತು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿಸುತ್ತಿದ್ದೇವೆ ಅಂಥ ಕಡೆಗಳಲ್ಲಿ ಕೆಲಸ ಕೊಡುತ್ತೇವೆಂದರೆ ಅಂಥ ಕಡೆಗಳಿಗೆ ಜನ ಹೋಗುವುದಿಲ್ಲ. ಆದಕಾರಣ ಅಂಥವರಿಗೆ ಹೇಗೆ ಕೆಲಸ ಕೊಡುವುದಕ್ಕೆ ಸಾಧ್ಯ? ಆದರೂ ಅವರಿಗೆ ಅನುಕೂಲವಾದ ಜಾಗಗಳಲ್ಲಿಯೇ ಕೆಲಸಗಳನ್ನು ಒದಗಿಸೋಣ. ಒಟ್ಟಿನಲ್ಲಿ ಈ ರೂರಲ್ ವರ್ಕ್ಸ್ ಪ್ರೋಗ್ರಾಂ ಯಶಸ್ವಿಯಾಗಬೇಕಾದರೆ ಮೊದಲು ಅವರಿಗೆ ಕೊಂಡುಕೊಂಡು ತಿನ್ನತಕ್ಕ ಶಕ್ತಿ ಬರಬೇಕು. ಈ ಒಂದು ಶಕ್ತಿ ಅವರಲ್ಲಿ ಬೆಳೆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳು ಬೆಳೆಯುಲಿಕ್ಕೆ ಅನುಕೂಲವಾಗುತ್ತದೆ ಅವರಿಗೆ ಕೊಂಡುಕೊಳ್ಳತಕ್ಕ ಶಕ್ತಿಯೇ ಇಲ್ಲದೆ ಹೋದರೆ ಏನು ಮಾಡಲಿಕ್ಕೆ ಸಾಧ್ಯ? ಮಾನ್ಯ ಮೊರಾರ್ಜಿ ದೇಸಾಯಿಯವರು ಕೈಗಾರಿಕೆಗಳ ಬಗ್ಗೆ ಮಾತನಾಡುತ್ತಾ, ಮನಿ ಸಪ್ಲೈ ನಿಲ್ಲಿಸಿದರೆ ಸಂಪೂರ್ಣವಾಗಿ ಎಲ್ಲ ಕಾರ್ಯಚಟುವಟಿಕೆಗಳು ನಿಲ್ಲುತ್ತವೆಂದು ಹೇಳಿದರು

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಾದರೆ ಮನಿ ಸರ್ಕ್ಯುಲೇಷನನ್ನು ರೆಡ್ಯೂಸ್ ಮಾಡಬೇಕೆಂದು ಹೇಳುತ್ತಿರಾ?

ಶ್ರೀ ಎಂ. ವೈ. ಘೋರ್ಪಡೆ.–ರಾಷ್ಟ್ರೀಯ ಗ್ರಾಮಾಂತರ ಯೋಜನೆ ಕಡೆಗೆ ಗಮನಕೊಟ್ಟರೆ ಅವರಿಗೆ ಕೊಂಡುಕೊಳ್ಳತಕ್ಕ ಶಕ್ತಿ ಬರುತ್ತದೆ.

SRI KAGODU THIMMAPPA.—I still say, so far you have not implemented the budgetted programmes.

ಶ್ರೀ ಎಂ. ವೈ. ಘೋರ್ಪಡೆ.—ಇನ್‌ಫ್ಲೇಷನ್ ಕಾರಣ ಏನು ಅಂದರೆ ಏನು ಹೇಳುವುದು? ಈಗ ಹಾಲಿ ಇರತಕ್ಕ 30 ಕೋಟಿ ಡಿಪಾಸಿಟ್ ಏನು ಇದೆ ಅದನ್ನು ಉಪಯೋಗಿಸಿದರೆ ಇದು ಕಡಿಮೆಯಾಗುತ್ತದೆ. ಜನಕ್ಕೂ ಕೆಲಸ ಸಿಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.— ನೀವು ಮಾಡಿರುವ ದೊಡ್ಡ ಪ್ರೋಗ್ರಾಂನ್ನು ಎಂಥ ಮೂಕ ಸರ್ಕಾರವೂ ಮಾಡುತ್ತದೆ.

ಶ್ರೀ ಎಂ. ವೈ ಘೋರ್ಪಡೆ.—ಬರ ಬಂದಾಗ ಜನ ಊರು ಬಿಟ್ಟು ಹೋಗುತ್ತಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ.—ಸ್ಪೇರ್ ಪಾರ್ಟ್ಸ್‌ಗೋಸ್ಕರ, ಮಿಷನರಿ ಚಾರ್ಜ್ ಮಾಡುವುದಕ್ಕೋಸ್ಕರ ಹಣ ಲೂಟಿ ಹೊಡೆದಿರಿ.

ಅಧ್ಯಕ್ಷರು.—ತಮಗೆ ಉತ್ತರ ಬೇಡ ತಾನೇ ಮತ್ತೆ ಮಾತನಾಡಿ ತಮ್ಮ ಎದುರಿಗೆ ಇರುವ ಮೈಕ್ ಮುರಿದು ಹೋಗುತ್ತೆ ತಮಗೆ ಉತ್ತರ ಬೇಕೋ, ಬೇಡವೋ? ಎರಡು ಪ್ರಶ್ನೆ ಇದೆ ನೀವು ಮತ್ತೆ ಗಲಾಟೆ ಮಾಡಿಕೊಂಡು ಮಾತನಾಡಿದರೆ ಓಟಿಗೆ ಹಾಕಿ ಅಸೆಂಬ್ಲಿಯನ್ನು ಮುಗಿಸಿಬಿಡುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹೊಸ ಸರ್ಕಾರ ಜನರ ಲೈಸೇಷನ್ ಮತ್ತು ಪೊಯಸ್ ಪ್ಲಾಟಿಟ್ಯೂಡ್ ಎಂದು ಹೇಳುತ್ತಾ ಬಂದಿದ್ದಾರೆ. ಯಾವುದನ್ನೂ ಇನ್ನೂ ವರೆಗೆ ನಿರ್ದಿಷ್ಟವಾದ ಕಾರ್ಯಕ್ರಮವನ್ನು ದೇಶದಮುಂದೆ ಇಟ್ಟಿಲ್ಲ ಎಂದು ಇಷ್ಟನ್ನು ನಾನು ಹೇಳಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಂದು ವಾರ ತಡೆಯಿರಿ.

ಶ್ರೀ ಎಂ. ವೈ ಘೋರ್ಪಡೆ.—ನನಗೆ ಅಂಥ ಭಯ ಏನೂ ಇಲ್ಲ? ಆ ಕಡೆ ಕುಳಿತರೂ ಅಷ್ಟೆ, ಈ ಕಡೆ ಕುಳಿತರೂ ಅಷ್ಟೆ. ಆ ಕಡೆ ಕುಳಿತರೆ ಇನ್ನೂ ಸ್ವಲ್ಪ ಇಂಟರೆಸ್ಟ್ ಇನ್ನೂ ಹೆಚ್ಚಿಗೆ ತೆಗೆದುಕೊಳ್ಳುತ್ತೇನೆ.

ರಾಷ್ಟ್ರದಲ್ಲಿ ಪ್ರಬಲವಾಗಿ ಎರಡು ಪಕ್ಷಗಳು ಇರಬೇಕೆಂದು ನೀವೇ ಹೇಳುತ್ತಾ ಇದ್ದೀರಿ. ಮೊನ್ನೆ ರಾಮಕೃಷ್ಣ ಹೆಗಡೆಯವರೂ ಕೂಡ ಕಾಂಗ್ರೆಸ್ ಪಕ್ಷ ಗೆದ್ದಹಾಗೆ ಜನತಾಪಕ್ಷವೂ ಗೆದ್ದಿದ್ದರೆ ಕಾಂಗ್ರೆಸ್ ಪಕ್ಷ ಏನೇನು ತಪ್ಪು ಮಾಡಿದ್ದರೂ ಅದೇರೀತಿ ತಪ್ಪು ಮಾಡುತ್ತಿದ್ದರು ಎಂದು ಹೇಳಿದರು ಪಂಚವಾರ್ಷಿಕ ಯೋಜನೆ ಎಲ್ಲಿದೆ ಎಂದು ಹೇಳಿದರೆ ನಾನು ಏನು ಉತ್ತರ ಹೇಳಬೇಕು ? ನನ್ನ ಆಯ ವ್ಯಯ ಭಾಷಣದಲ್ಲಿಯೇ ಪಂಚವಾರ್ಷಿಕ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಪಂಚವಾರ್ಷಿಕ ಯೋಜನೆ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರು 'ಹಾಸ್ಯಾಸ್ಪದ ಎಂದು ಹೇಳಿದ್ದಾರೆ. 5ನೇ ಪಂಚವಾರ್ಷಿಕ ಯೋಜನೆ ಎಲ್ಲಿದೆ ಎನ್ನುವ ಬಗ್ಗೆ ನನ್ನ ಆಯವ್ಯಯ ಭಾಷಣದ 12-13ನೇ ಪುಟದಲ್ಲಿ ಹೇಳಿದ್ದೇನೆ ಅದನ್ನು ನಾನು ಇಲ್ಲಿ ಓದಬೇಕಾಗುತ್ತದೆ.

12. The Fifth Five Year Plan of Karnataka will definitely be more than Rs. 1,100 crores, including an outlay of Rs. 72 crores on the Cauvery Basins irrigation projects and about Rs 200 crores on other major and medium irrigation projects. The outlay on power will be more than Rs. 300 crores, on Agriculture and Co-operation Rs. 2 0 crores on Social and Community Services about Rs, 220 crores and on Industry, Transport and Communications Rs. 100 crores.

13. The National Development Council has approved the Fifth Plan for the country. Karnataka's Fifth Plan will be about two-and a-half times our Fourth Plan outlay and more than all the previous four Five Year Plans taken together. This is a significant step up in the tempo of development in spite of two severe droughts that we have had to face and the initial handicap of an overdraft of about Rs. 71 crores in 1972. The per capita development outlay has been stepped up from Rs. 64 in 1971-72 to Rs, 143 in 1976-77 and Rs 160 in 1977-78.

SRI M. S. KRISHNAN.— There seems to be a plan holiday now according to the leaders of the Janatha Party.

SRI M.Y. GHORPADE.— The point is : we have achieved so much and so it is not right to say that there is no plan. Let us know what is the attitude of the new government is. We should not criticise them before they do something.

ಇದನ್ನು ಅವರು ಹಾಸ್ಯಾಸ್ಪದ ಎನ್ನುವುದಾದರೆ ನಾನು ಹೇಳಿರತಕ್ಕ ಮಾತು ಹಾಸ್ಯಾಸ್ಪದವೇ ? ಅವರು ಹೇಳಿರತಕ್ಕ ಮಾತು ಹಾಸ್ಯಾಸ್ಪದವೇ ? ಇಷ್ಟಾದರೂ ನಾನು ಅವರು ವಿರೋಧ ಪಕ್ಷದ ನಾಯಕರು ಎಂದು ಮನ್ನಣೆ ಕೊಡಬೇಕು. ಮತ್ತೊಂದು ಕಡೆ ಕೇಳಿದ್ದಾರೆ 36 ಕೋಟಿ ರೂಪಾಯಿ ಡಿಫಾಸಿಟ್ ಏನು ಇದೆ ಇದಕ್ಕೆ ಎಲ್ಲಿಂದ ದುಡ್ಡು ಬರುತ್ತದೆ ಎಂದು ಹೇಳಿದ್ದಾರೆ ಇದು ಕೇಳಬೇಕಾದ ಪ್ರಶ್ನೆ ಅದರ ಬಗ್ಗೆ ನನ್ನ ಆಯವ್ಯಯ ಭಾಷಣದ ಕೊನೆ ಪುಟದಲ್ಲಿ ಉತ್ತರ ಕೊಟ್ಟಿದ್ದೇನೆ. ಡಿಫಿಸಿಟ್ ಏನು ಇದೆ ಇದನ್ನು ನಾವು ಕಂಟ್ರೋಲ್ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಒಂದು ಸಂತೋಷ ಏನು ಎಂದರೆ ಇವತ್ತು ನಮ್ಮ ರಾಜ್ಯದ ವೇಸ್ ಅಂಡ್ ಮೀನ್ಸ್ 16 ಕೋಟಿ ರೂಪಾಯಿವರೆವಿಗೂ ಬಂದಿದೆ ಸುಮಾರು 16 ಕೋಟಿ ರೂಪಾಯಿಯನ್ನು ರಿಸರ್ವ್‌ಬ್ಯಾಂಕಿನಿಂದ ಹಣ ಪಡೆದರೂ ಯಾರೂ ಆಕ್ಷೇಪಣೆ ಮಾಡುವುದಿಲ್ಲ. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ 3 ಕೋಟಿ ರೂಪಾಯಿ ಮಾತ್ರ ಪಡೆಯಬಹುದಿತ್ತು. ಇದರ ಜೊತೆಗೆ ನ್ಯಾಷನಲ್ ಪ್ಲಾನ್ ಎಕ್ಸ್‌ಪೆಂಡೀಚರ್ ಕಡಿಮೆ ಮಾಡಿಕೊಳ್ಳುವುದರಿಂದ 8-10 ಕೋಟಿ ರೂಪಾಯಿ ಆದಾಯ ಜಾಸ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಯಾವ ವರ್ಷ ಎಷ್ಟೆಷ್ಟು ಎಂದು ನಿಗಧಿ ಮಾಡಿದ್ದೀರಾ?

ಶ್ರೀ ಎಂ. ವೈ. ಘೋರ್ಪಡೆ — ಈ ಬಗ್ಗೆ ರೂಲ್ಸ್ ಮಾಡಿದ್ದಾರೆ, ಆ ರೂಲ್ಸ್ ಪ್ರಕಾರ ಕೊಡುತ್ತಾರೆ. ಅದರಲ್ಲಿ ಯಾವ ಯಾವ ರಾಜ್ಯಕ್ಕೆ ವೇಸ್ ಅಂಡ್ ಮೀನ್ಸ್ ರೀತಿ ಕೊಡಬೇಕು ಎನ್ನುವುದು ಇದೆ.

2-30 ಪಿ.ಎಂ

ಆದಕಾರಣ ಈ ಬಡ್ಜೆಟ್ ಏನು ಇದೆ ಇದು ರಿಯಲಿಸ್ಟಿಕ್ ಆಗಿದೆ. ಯಾವುದೋ ಒಂದು ಬೂಟಾಟಿಕೆ ಬಡ್ಜೆಟ್ ಅಲ್ಲ. ಇದನ್ನು ಚುನಾವಣೆ ದೃಷ್ಟಿಯಿಂದ ಮಾಡಿಲ್ಲ. ತಾವು ಚುನಾವಣೆ ದೃಷ್ಟಿಯಿಂದ ಮಾಡಿದಾರೆ ಎಂದು ಹೇಳುವುದಾದರೆ ಇನ್ನು ಹಳ್ಳಿ ಭಾಷೆ ಉಪಯೋಗಿಸಬೇಕಾಗುತ್ತದೆ ಇದನ್ನು ಚುನಾವಣೆ ಆಗುವುದಕ್ಕಿಂತ ಮುಂಚೆ ಬರೆದಿದ್ದು ಚುನಾವಣೆ ಆದಮೇಲೆ ಮೊದಲನೇ ಪ್ಯಾರಾ ಬರೆದಿದ್ದೇನೆ. ನೀವು ಸ್ವಲ್ಪ ಜಾಣತನದಿಂದ ಹೇಳುವುದಾದರೆ ಫೈನಾನ್ಸ್ ಕಮಿಷನ್ ದೃಷ್ಟಿಯಿಂದ ಮಾಡಿದ್ದಾರೆ ಎಂದು ಹೇಳಿದರೆ ಅದು ಸ್ವಲ್ಪ ಜಾಣತನದ ಮಾತು ಆಗುತ್ತಿತ್ತು. ಇವೊತ್ತು ಫೈನಾನ್ಸ್ ಕಮಿಷನ್ ದೃಷ್ಟಿಯಿಂದ ಮೆಷ್ಟಿನಟ್‌ನನ್ಸ್‌ಗೆ ನ್ಯಾಯವಾಗಿ ಎಲ್ಲಿ ಎಷ್ಟು ತೋರಿಸಬೇಕು ಅದನ್ನು ಮಾಡಬೇಕು. ಅದರಲ್ಲಿ ತೀರಾ ಕಡಿಮೆ ಮಾಡಿದರೆ ಅದು ಪೆಟ್ಟಾಗುತ್ತದೆ. ಪ್ಲಾನ್ ಏನು ಡೆಲ್ಲಿಯಲ್ಲಿ ಅಪ್ರೂವ್ ಆಯಿತು ಅದಕ್ಕೆ ಹೆಚ್ಚಿಗೆ 5 ಕೋಟಿ ರೂಪಾಯಿ ನ್ಯೂಟ್ರಿಷನ್ ಪ್ರೋಗ್ರಾಂಗೆ ಸೇರಿಸಿದ್ದೇವೆ. 5 ಕೋಟಿ ರೂಪಾಯಿ ಡ್ರಾಟ್ ಪ್ರೋಗ್ರಾಂಗೆ ಸೇರಿಸಿದ್ದೇವೆ. ಇನ್ ಅಡಿಷನ್ ಟು ದಿ ಪ್ಲಾನ್ ಇಷ್ಟೆಲ್ಲಾ ಮಾಡಿ ಈ ಡೆಫಿಸಿಟ್ ಏನು ತೋರಿಸಿದ್ದೇವೆ. ಇದಕ್ಕೆ ಭಯಪಡಬೇಕಾಗಿಲ್ಲ. ಇದು ಹಣಕಾಸಿನ ದೃಷ್ಟಿಯಿಂದ ಜವಾಬ್ದಾರಿಯುತವಾದ ಬಡ್ಜೆಟ್ ಎಂದು ಹೇಳುತ್ತೇನೆ. ಇನ್ನು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರು ಬಹಳಷ್ಟು ಟೀಕೆ ಮಾಡಿದ್ದಾರೆ ಅದಕ್ಕೆ ಉತ್ತರ ಕೊಡಲಿಕ್ಕೆ ಹೋದರೆ ಒಂದು ದಿವಸ ಸಂಪೂರ್ಣಬೇಕಾಗುತ್ತದೆ ನಾನು ಇದರ ಬಗ್ಗೆ ಒಂದು ಪಟ್ಟಿ ಮಾಡಿ ಇಂಡಸ್ಟ್ರೀಸ್ ಮಿನಿಸ್ಟರಿಗೆ ಕಳುಹಿಸಿದ್ದೇನೆ. ಮತ್ತೆ ಅವರು ಇಂಟರ್‌ವ್ಯೂ ಮಾಡಲಿಕ್ಕೆ ಕೇಳಿದರು ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಡಿಮ್ಯಾಂಡ್ ಬಂದಾಗ ಆ ವಿಷಯಗಳಿಗೆ ಸಂಪೂರ್ಣವಾಗಿ ಉತ್ತರ ಕೊಡುತ್ತಾರೆ ಎಂದು ನಂಬಿದ್ದೇನೆ,

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ತಾವು ಏನು ಲಕ್ಷಾವಧಿ ಹಣವನ್ನು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಸಂಸ್ಥೆಗೆ ಕೊಟ್ಟಿದ್ದೀರೋ, ಅಲ್ಲೆ ದುರ್ವ್ಯವಹಾರ ಅಗುತ್ತಿದೆ, ದಯವಿಟ್ಟು ಅಲ್ಲಿಗೆ ಹಣ ಕೊಡುವುದನ್ನು ನಿಲ್ಲಿಸಿ ಅವರು ಕ್ಯಾಡಿಲಾಕ್ ಕಾರಿನಲ್ಲಿ ಓಡಾಡುತ್ತಿದ್ದಾರೆ. ನೀವೇನಾದರೂ ಕ್ಯಾಡಿಲಾಕ್ ಕಾರಿನಲ್ಲಿ ಓಡಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.— ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ ನಿಮಗೆ ಸಾಕಷ್ಟು ಹೇಳಲಿಕ್ಕೆ ಅವಕಾಶ ಇರುತ್ತದೆ. ಆ ಡಿಮ್ಯಾಂಡ್ ಬಂದಾಗ ಟೀಕೆ ಮಾಡಿದರೆ ಅವರು ಉತ್ತರ ಕೊಡುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಇದು ಬಹಳ ಜಾಣತನ ಆಯಿತು.

ಶ್ರೀ ಎಂ. ವೈ. ಘೋರ್ಪಡೆ.— ದಡ್ಡತನದಿಂದ ಹೇಗೆ ರಾಜ್ಯ ಆಳಲಿಕ್ಕೆ ಅಗುತ್ತದೆ. ಲಾ ಅಂಡ್ ಆರ್ಡರ್ಸ್ ಸಿಚ್ಯುಯೇಷನ್ ಡಿಟೋರಿಯರೇಟಿಂಗ್ ಎಂದು ಹೇಳಿದರು. ಇದನ್ನು ಸ್ಪಷ್ಟವಾಗಿ ನಿರಾಕರಿಸುತ್ತೇನೆ, ನಮ್ಮ ರಾಜ್ಯದಲ್ಲಿತಕ್ಕ ಲಾ ಅಂಡ್ ಆರ್ಡರ್ಸ್ ಸಿಚ್ಯುಯೇಷನ್ ಬಹಳ ಭದ್ರವಾಗಿದೆ. ಆದರೆ ನೀವು ಎಮರ್ಜೆನ್ಸಿ ಕಾಲದಲ್ಲಿ ಏನು ನಡೆಯಿತು ಎಂದು ಟೀಕೆ ಮಾಡಿದ್ದೀರಿ. ಅದಕ್ಕೆ ಮನ್ನಣೆ ಕೊಟ್ಟು ಜುಡಿಷಿಯಲ್ ಎನ್‌ಕ್ವಯರಿ ಮಾಡಿಸುತ್ತಿದ್ದಾರೆ. ಮತ್ತೊಂದು ಡಿಪಾರ್ಟಮೆಂಟಲ್ ಎನ್‌ಕ್ವಯರಿ ಮಾಡಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ.—ಸ್ವಾಮಿ ತುರ್ತುಪರಿಸ್ಥಿತಿಯಿಂದ ದೊಡ್ಡ ದೊಡ್ಡವರಿಗೆ ಏನು ತೊಂದರೆಯಾಯಿತು ಅದರ ಬಗ್ಗೆ ಎನ್‌ಕ್ವಯರಿ ನಡೆಸುವುದಾದರೆ ಬಡವರಿಗೆ ತುರ್ತು ಪರಿಸ್ಥಿತಿ ಸಮಯದಲ್ಲಿ ಬೂಟ್ಸ್ ಕಾಲಿನಲ್ಲಿ ಒದ್ದಿದ್ದಾರೆ ಅದರ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.— ಅದನ್ನು ಕಾಂಗ್ರೆಸ್‌ನವರೇ ಮಾತನಾಡುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.— ನಮಗೆ ಏನು ಸಾಧ್ಯ ಅದನ್ನು ಮಾಡಿದ್ದೇವೆ. ಅದರ ಬಗ್ಗೆ ಏನಾದರೂ ಟೀಕೆ ಮಾಡಬಹುದು, ಮಾನ್ಯ ಪ್ರಧಾನ ಮಂತ್ರಿಗಳೇ ರೋವಿಂಗ್ ಎನ್‌ಕ್ವಯಿರಿ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ಮುಖ್ಯ ಮಂತ್ರಿಗಳು ಹೇಳಬೇಕು. ಈಗ ಏನಾಗಿದೆ ಅಷ್ಟು ಮಾತ್ರ ಸಂಕ್ಷಿಪ್ತವಾಗಿ ಹೇಳಿದ್ದೇನೆ. ಇನ್ನು ಬ್ಯಾಂಕ್ ಕೋ ಆಪರೇಟೀವ್ಸ್ ಇದರ ಬಗ್ಗೆ ಒಂದು ಮಾತು ಹೇಳಿದ್ದೇನೆ. ಕೋ ಆಪರೇಟಿವ್ ಸೊಸೈಟಿಗಳಿಗೆ ಬ್ಯಾಂಕಿಂಗ್ ಟ್ರಾನ್ಸ್‌ಸ್ಯಾಕ್ಷನ್ ಕೊಟ್ಟಿದ್ದೇವೆ. ಅಲ್ಲಿ ಷಾರ್ಟ ಟರ್ಮ್ ಲೋನ್ ಮಿಡಿಯಂ ಟರ್ಮ್ ಲೋನಾಗಿ ಕನ್‌ವರ್ಷನ್ ಆಗುತ್ತಿಲ್ಲ ರೇಟ್ ಆಫ್ ಇಂಟರೆಸ್ಟ್ ವ್ಯತ್ಯಾಸ ಇದೆ. ನ್ಯಾಯವಾಗಿ ನೋಡಿದರೆ ವ್ಯತ್ಯಾಸ ಇರಬಾರದು ಇದರ ಬಗ್ಗೆ ರಿಸರ್ವ್ ಬ್ಯಾಂಕಿಗೆ ಬರೆದಿದ್ದೇವೆ, ಅದರೂ ಕೂಡ ಕಷ್ಟದ ಪರಿಸ್ಥಿತಿಯಲ್ಲಿ ಸಹಕರಿಸಬೇಕು ಎಂದು ಹೇಳುತ್ತೇನೆ. ಈಗ ಒಂದು ಮಾತು ಹೇಳಬೇಕು ಎಂದರೆ ಚುನಾವಣೆಯಾದನಂತರ ಈ ಬ್ಯಾಂಕುಗಳು ಬಡಜನರ ಕಾರ್ಯಕ್ರಮದ ಕಡೆ ಗಮನ ಕೊಡುವುದು ಬಹಳ ಕಡಮೆ ಮಾಡಿದ್ದಾರೆ. ಈ ಅನಿಶ್ಚಿತ ಪರಿಸ್ಥಿತಿ ಇರುವುದರಿಂದ ಈ ಹೊಸ ಸರ್ಕಾರದ ಧೋರಣೆ ಏನು ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇರಬಹುದು. ಇದರ ಬಗ್ಗೆ ನಾವಂತೂ ಹೇಳೇ ಹೇಳುತ್ತೇವೆ. ನೀವು ನಿಮ್ಮ ಸರ್ಕಾರಕ್ಕೆ ಹೇಳಿ,

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ ಉದಾಹರಣೆಗೆ ದಾವಣಗೆರೆ ಇರಿಗೇಟೆಡ್ ಭೂಮಿಯಲ್ಲಿ ಒಂದು ಎಕರೆಗೆ 30 ಟನ್ ಕಬ್ಬು ಬೆಳೆಯುತಕ್ಕವನು ಅವನಿಗೆ ಗೊಬ್ಬರಕ್ಕೆ ಸಾಲ ಸಿಕ್ಕದೇ 15 ಟನ್ ಕಬ್ಬು ಬೆಳೆಯುವ ಸ್ಥಿತಿಗೆ ಬಂದಿದೆ. ಅಗ್ರಿಕಲ್ಚರಲ್ ಪ್ರಾಡಕ್ಟ್ ಇಳಿಯುತ್ತಾ ಇರತಕ ಸಂದರ್ಭದಲ್ಲಿ ಸರ್ಕಾರದವರು ಕೂಲಂಕಷ ವಿಚಾರ ಮಾಡಿ ಅಂತಹವರಿಗೆ ಹಣ ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೆನರಾ ಬ್ಯಾಂಕ್‌ನವರು ಇವರು ಹೇಳಿರತಕ್ಕದ್ದರ ಬಗ್ಗೆ ಅವರು ಆನರ್ ಮಾಡಿಲ್ಲ ಅವರು ಅಷ್ಟು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಇದರ ಬಗ್ಗೆ ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ.

ಶ್ರೀ ಎಂ ವೈ. ಘೋರ್ಪಡೆ.— ಮಾನ್ಯ ವಿ ಎನ್. ಪಾಟೀಲರು, ಮತ್ತು ಮಾನ್ಯ ಟಿ. ಆರ್. ಶಾಮಣ್ಣನವರೂ ಒಂದೊಂದು ರೀತಿಯಲ್ಲಿ ಟೀಕೆ ಮಾಡಿದ್ದಾರೆ ಮಾನ್ಯ ಪಾಟೀಲರ ಇದು ಆಶಾದಾಯಕ ಬಜೆಟ್ ಅಲ್ಲ ಎಂದು ಹೇಳಿದ್ದಾರೆ. ಮಾನ್ಯ ಶಾಮಣ್ಣನವರು ಇದು ನಿರಾಶಾದಾಯಕ ಬಜೆಟ್ ಎಂದು ಹೇಳಿದ್ದಾರೆ. ಅಂದರೆ ಎರಡರ ಅರ್ಥವೂ ಒಂದೇ ಆದರೆ ಆಶಾದಾಯಕ ಬಜೆಟ್ ಯಾವ ರೀತಿ ಇರುತ್ತದೆ. ನಿರಾಶಾದಾಯಕ ಬಜೆಟ್ ಯಾವರೀತಿ ಇರುತ್ತದೆ ಎಂಬುದನ್ನು ಇಬ್ಬರೂ ಕೂಡ ಹೇಳಿಲ್ಲ. ಇಷ್ಟೊಂದು ಕಷ್ಟ ಪರಿಸ್ಥಿತಿಯಲ್ಲೂ ಕೂಡ ನಾವು ಕರ್ನಾಟಕದ ಅಭಿವೃದ್ಧಿಗೋಸ್ಕರ Irrigation Programme People Housing Programmes; Programmes for Physically Handicapped persons, Credit needs, ಮುಂತಾದುವನ್ನೆಲ್ಲಾ ಮಾಡಿದ್ದೇವೆ. ತಾವು ಇದನ್ನೆಲ್ಲಾ ಓದಿದರೆ ಬಹುಶಃ ಈ ರೀತಿ ಪ್ರಶ್ನೆ ಬನ್ನೇ ಕೇಳುತ್ತಾ ಇರಲಿಲ್ಲ. ಈ ಸಂದರ್ಭದಲ್ಲಿ ಬಜೆಟ್ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇದೊಂದು ಹಣಕಾಸಿನ ಸೂತ್ರ. ಇದರಿಂದ ಇಡೀ ಕರ್ನಾಟಕದ ಅಭಿವೃದ್ಧಿ ಸೂತ್ರವೇ ಇದರಲ್ಲಿ ಅಡಕವಾಗಿದೆ ಎಂದು ತಿಳಿದುಕೊಳ್ಳುವುದು ಮುಖ್ಯವಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಜನಗಳಲ್ಲಿ ದಕ್ಷತೆ, ಪ್ರಾಮಾಣಿಕತೆ ಉತ್ಸಾಹ ಇವೆಲ್ಲಾ ಇರಬೇಕಾಗುತ್ತದೆ.

ಶ್ರೀ ವಿ. ಎನ್. ಪಾಟೀಲ್.— ಇದು ಆಶಾದಾಯಕ ಬಜೆಟ್ ಅಲ್ಲ, ನಿರಾಶಾದಾಯಕವಾಗಿದೆ ಎಂದು ಹೇಳುವುದಕ್ಕೆ ಕಾರಣ ಏನೆಂದರೆ ಇವತ್ತು ರಾಜ್ಯದಲ್ಲಿ ಪವರ್ ಷಾರ್ಟೇಜ್ ಇದೆ, ಥರ್ಮಲ್ ಪ್ಲಾಂಟ್ ತರಬೇಕೆಂದು ಹೇಳಿದ್ದೇವೆ. ಒಂದು ವೇಳೆ ಥರ್ಮಲ್ ಪ್ಲಾಂಟ್ ತಂದಿದ್ದರೆ ರೈತರಿಗೆ ಕನ್‌ಸೆಷನ್ ಕೊಡುತ್ತೀರಾ ಎಂದರೆ ಅದನ್ನೂ ತಾವು ಮಾಡಲಿಲ್ಲ. ಇನ್ನು ಮುಂದೆ ಡೈರೆಕ್ಟ್ ಟ್ಯಾಕ್ಸೇಷನ್ ತೆಗೆದುಕೊಳ್ಳುತ್ತೇವೆ. ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ತೆಗೆದುಕೊಳ್ಳುವುದಿಲ್ಲ ಎಂದು ತಾವು ಹೇಳಿಲ್ಲ. ಆದುದರಿಂದ ಇದನ್ನು ನಾವು ನಿರಾಶಾದಾಯಕ ಬಜೆಟ್ ಎಂದು ಹೇಳಬೇಕಾಗಿದೆ.

ಶ್ರೀ ಎಂ. ವೈ. ಘೋರ್ಪಡೆ.— ಇದು ಪ್ರಾಣಿಕವಾದ ಬಡ್ಜೆಟ್. ಇದರಲ್ಲಿ ಕನ್‌ಸಂಪ್ಷನ್ ಲೋನ್ ಪಾಲಿಸಿ ಎಂದು ಮಾಡಿದ್ದೇವೆ, ಇದು ಬಹಳ ಮುಖ್ಯವಾದುದು. ಇದರ ಬಗ್ಗೆ ಹಲವಾರು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಹಿಂದೆ ಒಂದು ಸಾರಿ ನಾನು ಭಾಷಣ ಮಾಡುವಾಗ ಹೊಸ ದಾಗಿ "ಕನ್‌ಸಂಪ್ಷನ್ ಲೋನ್ ಪಾಲಿಸಿ" ಎಂದು ಮಾಡುತ್ತಿದ್ದೇವೆ. ಇದು ಆದಷ್ಟು ಬೇಗ ಜಾರಿಯಲ್ಲಿ ಬರುತ್ತದೆಂದು ಹೇಳಿದ್ದೆ, ಅದು ಈ ರೀತಿ ಇದೆ ;

Regarding consumption loan policy, I think I should read the statement I have prepared because it is a new policy which is now ready in all its details and will go before the Cabinet at its next meeting.

With the enactment of Debt Relief, measures envisaging total liquidation of debts due to private money lenders by Small and Marginal Farmers, agricultural labourers and persons belonging to weaker sections of the Community, traditional source of private finance has almost dried up. It is recognised these sources were not only providing finances for production purposes but also for consumption purposes.

While arrangements have been made for credit for production purposes it is recognised that the provision of credit for essential consumption purposes has not yet been established in any meaningful manner. Credit for consumption purposes has to be made available in order to ensure that the small and marginal farmers, agricultural labourers and persons belonging to weaker sections of community are not again driven to private money-lenders for such finances. It is therefore proposed to introduce a system of consumption credit in this State.

State Government on the basis of Shivaraman's report intend making available credit through co-operative structure. In our State about 5.3 lakh families would have to be financed who belong to those with holdings less than half an acre and landless labourers. It is this group that has to be catered to.

It is proposed to establish a system of consumption of finance to such persons all over the State. Rs. 125 per family will be made available of which a person can draw Rs. 100 for consumption purposes with particular reference to essential expenditure of funerals, marriages, medical purposes etc. In order to establish this system the State Government intends investing Rs. 20 lakhs as share capital in the Co-operative Societies and Rs. 80 lakhs will be available as bad debt reserve in order to ensure that the Societies do not suffer financial loss, if any, on account of bad debts. The funds will be found by D.C.C, Banks and the Karnataka State Co-operative Apex Bank with refinance by the Reserve Bank of India to the maximum extent possible. The details of the scheme are being worked out and it is proposed to introduce this shortly.

Though the Co-operative system on the basis of Rs. 125 per family we w ould be converting 3,50,000 families, Discussions have been held with the Commercial Banks in order to bring them also into the system. Commercial Banks will also offer Rs. 125 per family and will cover 1 75,000 families.

The Commercial Banks have agreed to make available consumption credit on this basis and necessary circular instructions have been issued regarding this matter to all the Deputy Commissioners.

Apart from this Banks have also being encouraged to make available loans against Gold ornaments as security. It will also help in meeting essential consumption loans of the people Jewel loans will be made available by D.C-C. Banks and their branches. Already. nearly Rs. 240 lakhs have been advanced as jewel loans by DCC Bank and such loans are expected to be increased in future.

SRI B. B. SAYANAK.—The Managers and the directors are willing to give money to the poor people but the Deputy Commissioner's office is not giving permission for two months.

SRI M. Y. GHORPADE.—I have myself admitted that the arrangements for consumption loan is not satisfactony not only in Karnatak but throughout the country. Therefore, we are making an effort to reach more than five lakhs of people with less than half an acre and make available to them through the 5000 and odd co-operatives In each co-operative we want to keep an initial amount so that there is no delay and this loan will be restricted to Rs. 125. Rs. 125 will be the loan and they will be allowed to have Rs 100. ಏಕೆಂದರೆ ಒಂದು ಸಾರಿ ಸಾಲ ತೆಗೆದುಕೊಂಡು ಹೋದರೆ ಮತ್ತೆ ಅವರು ಬರುವುದಿಲ್ಲ ಕೊಟ್ಟ ದುಡ್ಡು ವಾಪಸ್ಸು ಬರದಿದ್ದರೆ ನಾವು ಏನು ಮಾಡುವುದು. ನಾವು ಈ ಪಾಲಿಸಿಯನ್ನು ಏತಕ್ಕೆ ತರುತ್ತಿದ್ದೇವೆ ಎಂದರೆ ಬಡವರ ಮನೆಯಲ್ಲಿ ಯಾರಾದರೂ ಸತ್ತರೆ, ಮದುವೆ ಆದರೆ ಅವರ ಹತ್ತಿರ ದುಡ್ಡು ಇರುವುದಿಲ್ಲ. ಅಂಥ ಸಂದರ್ಭದಲ್ಲಿ ಈ ಕೋಆಪರೇಟಿವ್ ಸೊಸೈಟಿಗಳು ಷ್ಯೂರಿಟಿ ಬೇಸಿಸ್ ಮೇಲೆ ಅವರಿಗೆ 100 ರೂ. ಕೊಡಬಹುದು

ಶ್ರೀ ಕಾಗೋಡು ತಿಮ್ಮಪ್ಪ.—ಸತ್ತು ಹೋದ ಮನುಷ್ಯರಿಂದ ಷ್ಯೂರಿಟಿ ತೆಗೆದುಕೊಳ್ಳಬೇಕು ಅಷ್ಟೆ. ಸ್ವಾಮಿ, ಇವತ್ತು ಒಂದು ಬಾಸಿಂಗ, ಸ್ವಲ್ಪ ವೀಳ್ಯದೆಲೆ ತೆಗದುಕೊಂಡು ಬಂದರೆ ನೀವು ಕೊಡುವ 100 ರೂಪಾಯಿ ಖರ್ಚಾಗಿ ಹೋಗುತ್ತದೆ ಬಾಸಿಂಗ ಒಂದಕ್ಕೆ ಸುಮಾರು 30 ರೂಪಾಯಿ ಆಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಅದಕ್ಕಾಗಿಯೇ ಸಾಲಕ್ಕಾಗಿ ಸಾಹುಕಾರರ ಹತ್ತಿರ ಹೋಗ ಬಾರದೆಂದು ಸೊಸೈಟಿಗಳಲ್ಲಿ ಸಾಲವನ್ನು ಕೊಡುವಂಥ ಏರ್ಪಾಡನ್ನು ಮಾಡಿರುತ್ತೇವೆ. ಈ ರೀತಿ ಸಾಲವನ್ನು ತೆಗೆದುಕೊಳ್ಳಬೇಕಾದರೆ ಷ್ಯೂರಿಟಿಯನ್ನು ಕೊಡಬೇಕಾಗುತ್ತದೆ. ಸಾಮಾನ್ಯವಾಗಿ ಜನರಲ್ಲಿ ಒಂದು ಸಂಪ್ರದಾಯವಾಗಿ ಬಿಟ್ಟಿರುತ್ತದೆ. ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಬಿಟ್ಟರೆ ಮುಗಿಯಿತು ಅದನ್ನು ವಾಪಸ್ ಕೊಡುವ ಮನೋಭಾವ ಬರುವುದಿಲ್ಲ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಸರ್ಕಾರದಿಂದ ತೆಗೆದುಕೊಂಡ ಸಾಲವನ್ನು ವಾಪಸ್ ಕೊಟ್ಟರೆ ಮತ್ತೆ ಸಾಲ ವನ್ನು ಪಡೆಯಲು ಅವಕಾಶವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೋಟಿ ಕೋಟಿಗಟ್ಟಲೇ ಹಣ ಸಾಲ ತೆಗೆದುಕೊಳ್ಳತಕ್ಕಂಥ ದೊಡ್ಡ ದೊಡ್ಡ ಬಂಡವಾಳ ಶಾಹಿಗಳು ಜಾಮೀನನ್ನು ಕೊಡುತ್ತಾರೆಯೇ?

SRI M. Y. GHORPADE.—The idea is simple and modest. We want to somehow initiate a system in Karnataka where the poorest of the poor can get at least Rs. 125 for something very urgent.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಹೇಳುವುದೇನೆಂದರೆ ಯಾರಾದರೂ ಸತ್ತಾಗ ಮದುವೆ ಮಾಡಬೇಕೆಂದಾಗ, ಔಷಧಿಗಳನ್ನು ಕೊಂಡುಕೊಳ್ಳಬೇಕಾದಾಗ, ಇನ್ನೂ ಅಗತ್ಯ ಸಂದರ್ಭಗಳಲ್ಲಿ ಅಂದರೆ ಬಟ್ಟೆಯನ್ನು ತೆಗೆದುಕೊಳ್ಳಬೇಕೆಂದಾಗ ಮಕ್ಕಳಿಗೆ ಪುಸ್ತಕಗಳನ್ನು ತೆಗೆಯಬೇಕಾದಾಗ ಸ್ಕೂಲಿಗೆ ಸೇರಿಸಬೇಕೆಂದಾಗ ಸಾಲವನ್ನು ತೆಗೆದುಕೊಳ್ಳಲು ಸೊಸೈಟಿಗಳಿಗೆ ಹೋಗಬೇಕಾದರೆ ಯಾರಹತ್ತಿರ ಷೂರಿಟಿಗೆ ಹೋಗಬೇಕು. ಶೂರಿಟಿ ಇಲ್ಲದಿದ್ದರೆ 1 0 ರೂಪಾಯಿ ಕೂಡ ಸಾಲ ಸಿಗುವುದಿಲ್ಲ. ಬ್ಯಾಂಕ್‌ಗಳಲ್ಲೂ 10) ರೂಪಾಯನ್ನು ತೆಗೆದುಕೊಳ್ಳಬೇಕಾದರ ಶೂರಿಟಿ ಬೇಕು 100 ರೂಪಾಯಿಗಳನ್ನು ಸರ್ಕಾರದವರು ಸಾಲವಾಗಿ ಕೊಡದಿದ್ದರೆ ಖಾಸಗಿಯವರಿಗೆ ಸಾಲವನ್ನು ಕೊಡಲು ಧೈರ್ಯವಾದರೂ ಹೇಗೆ ಬರುತ್ತದೆ? ಸರ್ಕಾರಿ ನೌಕರರಿಗೆ ಸಾಲವನ್ನು ಕೊಡುತ್ತೀರಿ, ಅವರು ಶೂರಿಟಿಯನ್ನು ಕೊಡುತ್ತಾರೆಯೇ?

ಶ್ರೀ ಎಂ. ವೈ. ಘೋರ್ಪಡೆ,—ಅವರ ಸಂಬಳವೇ ಶೂರಟಿ, ಅವರ ಜೀವವೇ ಶೂರಿಟಿ.

ಶ್ರೀ ಕಾಗೋಡು ತಿಮ್ಮಪ್ಪ —ಡಿ. ಎ. ಇದೆಲ್ಲ ಕೊಟ್ಟರಲ್ಲ. ಇದಕ್ಕೆಲ್ಲ ಶೂರಿಟಿ ಕೊಟ್ಟರೆ?

SRI M. Y. GHORPADE.—We are determined to make available Rs. 10) to 125 to the poor. The details of these matters have yet to be finalised and even when they are finalised they are not final because we will improve them with experience. The intention is very clear. Government is making available Rs. 1 crore which will generate another Rs. 4 crores, About 5 crores will be available. At least Government and co-operatives will make available Rs, 5 crores as loan to nearly three hundred lakhs of people, In addition to this, we have persuaded the banking system to try and give a similar loan of Rs, 125 to another 1.75 lakhs. This is a sort of programme which has not been done anywhere else, We are trying to break new ground. Let us not be very squeamish about it, We are also bound to correct it, Let us steat it and go on improving upon it. The intention is very clear. We are going to put at the disposal of the co-operative societies some money to start functioning on this basis.

ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಸ್ವಲ್ಪ ಅತೃಪ್ತಿ ಉಂಟಾಗಿರಬಹುದು. ಸರ್ಕಾರ ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಅತೃಪ್ತಿ ಏತಕ್ಕೆ ಉಂಟಾಗಿರುತ್ತದೆಂದರೆ ಹೊಸದಾಗಿ ಕಾನೂನು ಜಾರಿಯಲ್ಲಿ ಬರುತ್ತಾ ಇದೆ. ಅಗ್ರಿಕಲ್ಚರ್ ಇನ್‌ಕಮ್‌ಟ್ಯಾಕ್ಸ್ ಬಹಳ ಸುಲಭವಾದ ರೀತಿಯಲ್ಲಿ ಮಾಡಬೇಕು ಎರಡು ಸೈನ್‌ಟಿಫಿಕ್ ಆಗಿ ನೋಟೀಸ್‌ಗಳನ್ನು ಕಳುಹಿಸಿಕೊಟ್ಟಿದ್ದಾರೆ. ಜನರಿಗೆ ಇದರಿಂದ ಬಹಳ ಭಯ ಉಂಟಾಗಿರಬಹುದು ಯಾವ ಕ್ಯಾಟಗರಿ ಭೂಮಿ ಎಷ್ಟೆಷ್ಟು ಇದೆ ಎನ್ನುವುದನ್ನು ತಿಳಿದುಕೊಳ್ಳುವ ಸಲುವಾಗಿ ಇದನ್ನು ಜಾರಿಗೊಳಿಸಲಾಗಿದೆ, ಮತ್ತು ಯಾವ ಯಾವ ಭೂಮಿಯಲ್ಲಿ ಯಾವ ಬೆಳೆಯನ್ನು ಇಟ್ಟಿದ್ದಾರೆ, ಎಷ್ಟು ಖರ್ಚು ಮಾಡಿದ್ದಾರೆ ಇದನ್ನೆಲ್ಲ ಸಿಂಪ್ಲಿಫೈವಾಡಿ ಈ ಆಧಾರದ ಮೇಲೆ ಪಟ್ಟಾಭೂಮಿ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳುವ ಸಲುವಾಗಿ ನೋಟೀಸನ್ನು ಕಳುಹಿಸಿಕೊಟ್ಟಿದ್ದಾರೆ ಲ್ಯಾಂಡ್ ರಿಫಾರ್ಮ್ ಆಕ್ಟ್ ಪ್ರಕಾರವಾಗಿ ಡಿಕ್ಲರೇಷನ್ ಮಾಡಿದ್ದಾರೆ. ಪಹಣಿಯನ್ನು ರೆಕಾರ್ಡ್‌ನಲ್ಲಿ ನೋಡಿ ಯಾವ ಕಡೆ ಎಷ್ಟು ಇದೆ ಎನ್ನುವುದನ್ನು ಸರಿಯಾಗಿ ತಿಳಿದುಕೊಂಡು ಅದನ್ನು ಸರಿಪಡಿಸ

ವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ರೈತರು ಭಯಪಡಬೇಕಾಗಿಲ್ಲ. ಈ ರೀತಿ ಮಾಡುವುದರಿಂದ ಎಷ್ಟು ಭೂಮಿ ಇದೆ ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಅಸೆಸ್‌ಮೆಂಟ್ ಮಾಡಲಿಕ್ಕೆ ಹಿಂಸೆಯಾಗುತ್ತದೆ. ಈ ರೀತಿ ಹಿಂಸೆಯಾಗಬಾರದೆಂಬುದೇ ಸರ್ಕಾರದ ಉದ್ದೇಶವಾಗಿರುತ್ತದೆ. ನೋಟಿಫಿಕೇಶನ್ ಇದರ ಅವಧಿಯನ್ನು ಜೂನ್ ಅಖೈರ್‌ವರೆಗೂ ಮುಂದುವರಿಸಲಾಗಿದೆ. ನಮ್ಮ ರಾಜ್ಯದಲ್ಲಿ 36 ಲಕ್ಷ ರೈತರು ಇದ್ದಾರೆ. ಆದರೆ ಅಗ್ರಿಕಲ್ಚರ್ ಇನ್‌ಕಮ್ ಟ್ಯಾಕ್ಸ್ ಅನ್ವಯವಾಗುವಂಥ ರೈತರು ಒಂದು ಲಕ್ಷ ಮೂವತ್ತಾರು ಸಾವಿರ ಜನರು ಇದ್ದಾರೆ ಈಗಾಗಲೇ ಅರ್ಧದಷ್ಟು ಜನರಿಗೆ ನೋಟಿಫಿಕೇಷನ್ ಕಳುಹಿಸಿಕೊಟ್ಟಿದೆ. ಇನ್ನು ಉಳಿದ ಅರ್ಧ ಜನರಿಗೆ ನೋಟಿಫಿಕೇಶನ್ ಕಳುಹಿಸಿಕೊಡಬೇಕಾಗಿದೆ. ಪ್ರತಿಯೊಂದು ಸಲ ರೈತರಿಗೆ ಸುಲಭವಾದ ರೀತಿಯಲ್ಲಿ ತಿಳಿಯಲು ಕನ್ನಡದಲ್ಲಿಯೇ ನೋಟಿಫಿಕೇಶನ್‌ಗಳನ್ನು ಕಳುಹಿಸಿಕೊಡಲಾಗುತ್ತಿದೆ. ನೋಟಿಫಿಕೇಶನ್ ಪೂರ್ಣ ಮಾಹಿತಿಯನ್ನು ಕೊಡಲು ಅವಧಿ ಕೂಡ ಎಕ್ಸ್‌ಟೆಂಡ್ ಮಾಡಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ.—ಈ ವಿಧವಾದ ಕಾನೂನನ್ನು ಜಾರಿ ಮಾಡತಕ್ಕಂಥ ಕಾಲದಲ್ಲಿ ಸ್ಪಷ್ಟವಾಗಿ ನೋಟೀಸ್ ಕೊಡುವುದಕ್ಕೆ ಮುಂಚಿತವಾಗಿ ಜಮೀನಿನ ಕ್ಲಾಸಿಫಿಕೇಶನ್ ಮಾಡಿ ಮೊದಲು ಪಟ್ಟಾ ಕೊಟ್ಟು ನೋಟಿಫಿಕೇಶನ್ ಕೊಡುವುದಾಗಿ ಸರ್ಕಾರ ಒಪ್ಪಿಕೊಂಡಿತ್ತು. ಈವಾಗ ತಾವು ಡಿಮ್ಯಾಂಡ್ ನೋಟೀಸ್ ಕಳುಹಿಸಿಕೊಟ್ಟು ತಕರಾರು ಮಾಡುವುದು ಒಳ್ಳೆಯದಲ್ಲವೆಂದು ಹೇಳುತ್ತೇನೆ

ಡಿಮ್ಯಾಂಡ್ ನೋಟೀಸ್ ಕೊಡುವ ಮೊದಲೇ ಪಹಣಿ ಪ್ರಕಾರ ಅವನಿಗೆ ಭೂಮಿ ಎಷ್ಟಿದೆ ಎಂಬುದನ್ನು ತಿಳಿದುಕೊಂಡು ಆಮೇಲೆ ಕ್ಲಾಸಿಫಿಕೇಷನ್ ಮಾಡಬೇಕಾಗಿದೆ. ಇದನ್ನು ತಾವು ಒಪ್ಪಿದ್ದೀರಿ. ಈ ಭೂಸುಧಾರಣಾ ಕಾಯಿದೆ ಪ್ರಕಾರ ನೋಟೀಸ್ ಕೊಡುವುದಕ್ಕೆ ಮುಂಚಿತವಾಗಿ ಅವನಿಗೆ ಹಿಡುವಳಿ ಭೂಮಿಯನ್ನು ಕ್ಲಾಸಿಫಿಕೇಷನ್ ಮಾಡಿಕೊಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೀರಿ. ಈ ಭರವಸೆ ಪೂರ್ಣವಾಗುವುದರಲ್ಲಿ ಈ ನೋಟೀಸನ್ನು ಕೊಟ್ಟಿದ್ದೀರಿ.

3. 00 ಪಿ. ಎಂ.

ಶ್ರೀ ಎಂ ವೈ. ಘೋರ್ಪಡೆ.—ನಮಗೆ ಮಾಹಿತಿ ಸಿಕ್ಕುವುದು ಲ್ಯಾಂಡ್ ರಿಫಾರಂಸ್ ಡಿಕ್ಲರೇಷನ್ ಪ್ರಕಾರ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಮಾಹಿತಿ ತಾಲ್ಲೂಕು ಆಫೀಸಿನಲ್ಲಿ ಇಲ್ಲವೇ ?

ಶ್ರೀ ಎ. ವೈ. ಘೋರ್ಪಡೆ.—ಇಲ್ಲ. ಈ ಬಗ್ಗೆ ನಾವು ಪ್ರತಿಯೊಂದು ಕಡೆಯಿಂದ ನೋಡಬೇಕಾಗುತ್ತದೆ. ನಮ್ಮ ಅಧಿಕಾರಸ್ಥರಿಗೆ ನೀನೇ ಹೋಗಿ ರೈತನನ್ನು ಭೇಟಿಯಾಗಿ ಫಾರಂ ಫಿಲಪ್ ಮಾಡುವುದಕ್ಕೆ ಸಹಾಯ ಮಾಡಬೇಕು ಎಂದು ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವತ್ತು ಏತಕ್ಕೆ ಈ ಮಾತನ್ನು ಹೇಳಲಿಲ್ಲ ?

ಶ್ರೀ ಎಂ. ವೈ. ಘೋರ್ಪಡೆ.—ಈ ಪ್ರಾಕ್ಟಿಕಲ್ ಡಿಫಿಕಲ್ಟೀಸ್‌ನಿಂದ ರೈತರಿಗೆ ಅನ್ಯಾಯವಾಗುತ್ತದೆ ಎಂದು ನಾವು ಅವತ್ತು ಪ್ರಶ್ನೆ ಮಾಡಿದ್ದೇವೆ. ಇಲ್ಲಿ ಏನಾಗಿದೆ ಎಂದರೆ ಈ ಕೆಟೋಗೋರಿಯನ್ನು ಲ್ಯಾಂಡ್ ರಿಫಾರಂಸ್ ಪ್ರಕಾರ ತೀರ್ಮಾನ ಮಾಡಬೇಕು. ಇದರಿಂದ ರೈತನಿಗೆ ಹಿಂಸೆಯಾಗುವುದಿಲ್ಲ ಎಂಬುದನ್ನು ಕಂಡುಹಿಡಿದಿದ್ದೇವೆ. ಆದರಂತೆ ನೋಟಿಫಿಕೇಷನ್ ಕಳಿಸಿದೆ. ಅದರ ಪ್ರಕಾರ ಲ್ಯಾಂಡ್ ಕ್ಲಾಸಿಫಿಕೇಷನ್ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ರೈತರಿಗೆ ಬಹಳ ಹಿಂಸೆಯಾಗುತ್ತದೆ. ಇದು ನೀವು ಹೇಳುವ ರೀತಿಯಲ್ಲಿ ಸುಲಭವಲ್ಲ. ಅಲ್ಲಿ ವಿಲೇಜ್ ಅಕೌಂಟೆಂಟ್, ರೆವೆನ್ಯೂ ಇನ್‌ಸ್ಪೆಕ್ಟರ್ಸ್ ಇರುತ್ತಾರೆ ಈ ಲ್ಯಾಂಡ್ ರಿಫಾರಂಸ್ ಪ್ರಕಾರ ಜಮೀನನ್ನು ಕ್ಲಾಸಿಫಿಕೇಷನ್ ಮಾಡುವುದಕ್ಕೆ ಅವರಿಗೆ ನಿರ್ದೇಶನ ಕೊಟ್ಟಿದ್ದೀರಿ. ಅಲ್ಲಿ ಜಮೀನಿನ ಪಟ್ಟಿ ಏನಿದೆ ಈ ಬಗ್ಗೆ ಅವರಿಗೆ ಡೈರೆಕ್ಷನ್ ಕೊಟ್ಟು ಪಟ್ಟಿ ರಿವೈಸ್ ಮಾಡಿಕೊಡಿ ಎಂದರೆ ಆಗುತ್ತಿತ್ತು.

SRI M. Y. GHORPADE.—I am one with Mr. Thimmappa. Our intention is to help them. What has happened is this. They have sent notices on the Land Reforms record basis. I have given time also. No inconvenience will be caused to the people I have instructed our officers to go to at least Taluk level, invite the assessees with Revenue people and held them to fill up these forms. Once the land is classified to the satisfaction of the farmer I am confident that there will be no further difficulties. I am not dogmatic about it. If there is any other difficulties, I am open to discuss this: I shall not stand on any prestige I am prepared to go into any difficulties and try to solve them.

SRI KAGODU THIMMAPPA.—In some quarters you have instructed to pay advance taxes ?

SRI M. Y. GHORPADE.—Notices are not demands. When the assessment starts, if he does not respond to the notice, then the question of assessment arises. Notice is not a demand. If they don't respond then, the officer will have no option left to make assessment. I can assure all the hon. Members that we will avoid these difficulties and solve them. And even if some other difficulties come, I request them to bring to our notice to solve them.

SRI V. N. PATIL.—What about 'Asmani-pari' lands ?

SRI M Y. GHORPADE.—In dry land there are four categories. I have told you that there not be any hardships.

ಇನ್ನು ಅರಿಯರ್ಸ್ ಆಫ್ ಲ್ಯಾಂಡ್ ಡ್ಯೂಸ್ ಏನಿದೆ ಇದರ ಮೇಲೆ ಟೀಕೆಗಳಿವೆ. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಯಿತು. ಈ ಲ್ಯಾಂಡ್ ಡ್ಯೂಸನ್ನು ಕಲೆಕ್ಟ್ ಮಾಡುವಲ್ಲಿ ಯಾರು ತೊಂದರೆಗೆ ಒಳಪಡದಂತೆ ಒಂದು ಲಯಬಿಲಿಟಿ ನಿಗದಿ ಮಾಡಿ ಅವಷ್ಟು ಮಟ್ಟಿಗೆ ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ವಸೂಲು ಮಾಡಬೇಕೆಂದು ಈ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇದಕ್ಕೋಸ್ಕರ ಒಂದು ಕ್ಯಾಬಿನೆಟ್ ಸಬ್‌ಕಮಿಟಿ ರಚನೆಯಾಗಿದೆ, ಈ ಸಬ್‌ಕಮಿಟಿಯವರು ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ ಇದರಿಂದ ಯಾವರೀತಿ ಅವರಿಗೆ ತೊಂದರೆಯಾಗುತ್ತದೆ. ಲಯಬಲಿಟಿ ಇಷ್ಟು ಎಂದು ನಿಗದಿ ಮಾಡಿದಮೇಲೆ ರೀಸನಬಲ್ ಇನ್‌ಸ್ಟಾಲ್‌ಮೆಂಟ್ಸ್‌ನಲ್ಲಿ ಯಾವ ರೀತಿ ವಸೂಲು ಮಾಡಬೇಕು ಎಂಬುದರ ಬಗ್ಗೆ ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರುವುದಕ್ಕೆ ಈ ಕ್ಯಾಬಿನೆಟ್ ಸಬ್‌ಕಮಿಟಿ ರಚನೆಯಾಗಿರುವುದರಿಂದ ಇದರ ಬಗ್ಗೆ ಸಹ ನಾವು ಎಚ್ಚರಿಕೆಯಿಂದ ನೋಡಿಕೊಳ್ಳುತ್ತೇವೆ

ಇನ್ನು ಈ ಕಾಳೀನದಿ ಪ್ರಾಜೆಕ್ಟ್ ಬಗ್ಗೆ ಮಾನ್ಯ ಶಾಮಣ್ಣನವರು ಹೇಳಿದ್ದಾರೆ. ಏನೆಂದರೆ ಇದು ಮುಖ್ಯವಾದ ಪ್ರಾಜೆಕ್ಟ್ ಆಗಿರುವುದರಿಂದ ಇದಕ್ಕೆ ಹಣಕಾಸಿನ ಅಭಾವ ಇರಬಾರದೆಂದು ಹೇಳಿದ್ದಾರೆ ಇದಕ್ಕೆ ಹಣಕಾಸಿನ ಅಭಾವ ಇರುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇದಕ್ಕಾಗಿ ಈ ವರ್ಷ 45ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಮುಂದಿನ ವರ್ಷ ಇದಕ್ಕೆ 50ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ನಮಗೆ ಗೊತ್ತಿರುವಹಾಗೆ ಈ ಕಾಳೀನದಿಯೋಜನೆ ಬಹಳ ಮುಖ್ಯವಾದ ಯೋಜನೆಯಾಗಿರುವುದರಿಂದ ಅದಕ್ಕೆ ಯಾವ ತೊಂದರೆಯೂ ಉಂಟಾಗದಂತೆ ನೋಡಿಕೊಳ್ಳುತ್ತೇವೆ. ಆದರಿಂದ ಮಾನ್ಯ ಶಾಮಣ್ಣನವರಿಗೆ ಭಯ ಇರಬೇಕಾದ್ದು ಇಲ್ಲವೆಂದು ಹೇಳುತ್ತೇನೆ.

ಮಾನ್ಯಸದಸ್ಯರು ಈ ಥರ್ಮಲ್ ಯೂನಿಟ್ ಬಗ್ಗೆ ಪದೇ ಪದೇ ಹೇಳಿದ್ದಾರೆ. ಈ ಹೈಡ್ರೋ ಎಲೆಕ್ಟ್ರಿಕ್ ಪವರನ್ನು ಥರ್ಮಲ್ ಪವರ್ ಕೆಪಾಸಿಟಿಯನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. ಏಕೆಂದರೆ ನಾವು ಈ ಹೈಡ್ರೋ ಎಲೆಕ್ಟ್ರಿಸಿಟಿ ಮೇಲೆ ಅವಲಂಬಿಸಿರುವುದು ಅಷ್ಟು ಹಿತವಲ್ಲ. ಆದ್ದರಿಂದ ತಾವೂ ಕೂಡ ತಮ್ಮದೇ ಆ ರೀತಿಯಲ್ಲಿ ಕೇಂದ್ರ ಸರ್ಕಾರದವರ ಮೇಲೆ ಇದರ ಬಗ್ಗೆ ಒತ್ತಾಯವನ್ನು ತರುತ್ತೀರಿ ಎಂದು ನಾನು ನಂಬಿದ್ದೇನೆ. ಇನ್ನು ಮಾನ್ಯ ಶಾಮಣ್ಣನವರು ಯಾವ ಟ್ಯಾಕ್ಸನ್ನು ಹಾಕಿದರೂ ಟೀಕೆ ಮಾಡುತ್ತಾರೆ. ಆದರೆ ಈ ಸಲ ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟಿದ್ದಾನೋ ಏನೋ, ಈ ಸಿನಿಮಾ ಟ್ಯಾಕ್ಸ್ ಹಾಕಿರುವ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲವೆಂದು ಹೇಳಿದ್ದಾರೆ. ಅವರ ಕಡೆಯಿಂದ ಈ ಟ್ಯಾಕ್ಸ್ ಬಗ್ಗೆ ನೋ ಅಬ್ಜಕ್ಷನ್ ಸರ್ಟಿಫಿಕೇಟ್ ಬಂದಿದೆ. ಇನ್ನು ಓಲ್ಡ್ ಏಜ್ ಪೆನ್‌ಷನ್ ಬಗ್ಗೆ ಮಾನ್ಯ ಸದಸ್ಯರುಗಳು ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ. ಕೆಲವರು ಇದನ್ನು ಅನ್ಯಾಯವಾಗಿ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಮತ್ತು ಇದನ್ನು ತಕ್ಷಣ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇನೆ.

ಇನ್ನು ಮಾನ್ಯ ಭಾಂಗಿಯವರು ಇನ್‌ಟೆನ್ಸಿವ್ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಅವರ ಕ್ಷೇತ್ರಕ್ಕೆ ಹೋಗಿ ನೋಡಿದ್ದೇನೆ. ಆದರ ಬಗ್ಗೆ ವಿವರ ಹೇಳುವುದಕ್ಕೆ ಕಾಲಾವಕಾಶ ಇಲ್ಲ. ಈ ಕಾರ್ಯಕ್ರಮಗಳೇನಿವೆ ಇದು ಹಣದ ಅಭಾವದಿಂದ ಕುಂಠಿತವಾಗುವುದಿಲ್ಲ ; ಇವಕ್ಕೆ ಹಣದ ಅಭಾವ ಬರುವುದಕ್ಕೆ ಬಿಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲ ಕೆಲಸಕ್ಕೂ ಹೀಗೇ ಹೇಳುತ್ತೀರಿ, ಹಣದ ಅಭಾವದಿಂದ ಕುಂಠಿತವಾಗುವುದಿಲ್ಲ ಎಂದು ಮಂತ್ರ ಹೇಳಿದಹಾಗೆ ಹೇಳುತ್ತೀರಿ.

ಶ್ರೀ ಎಂ. ವೈ. ಘೋರ್ಪಡೆ.—ಹಾಗೇನಿಲ್ಲ. ಈಗ ಸಾಲ ಕೊಟ್ಟಿರತಕ್ಕ ಹಣ ಕ್ರಮವಾಗಿ ವಾಪಸ್ ಬರದೇಹೋದರೆ ಕೆಲಸ ನಿಂತುಹೋಗುತ್ತದೆ. ಹಣ ಕೊಡುವಾಗ ಯಾವಶರತ್ತಿನ ಮೇಲೆ ಕೊಟ್ಟಿರುತ್ತೇವೆಯೋ ಅದರಂತೆ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಎಲ್ಲರ ಮೇಲಿದೆ. ಹಾಗೆ ಮಾಡುವುದಾದರೆ ಹ್ಯಾಂಡ್‌ಲೂಂ ಡೆವಲಪ್‌ಮೆಂಟಿಗೋಸ್ಕರ ಎಷ್ಟು ಹಣ ಬೇಕು ಅಷ್ಟು ಹಣ ಖರ್ಚು ಮಾಡುವುದಕ್ಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಹ್ಯಾಂಡ್‌ಲೂಂ ಬಹಳ ಹೀನ ಸ್ಥಿತಿಯಲ್ಲಿದೆ, ಹಣ ಕೊಡುವುದಕ್ಕೆ ಸಾಧ್ಯವಿಲ್ಲ ಎಂಬ ವಾದ ಬರುತ್ತದೆ. ಹ್ಯಾಂಡ್‌ಲೂಂ ಡೆವಲಪ್‌ಮೆಂಟ್ ಮಾಡಬೇಕಾದರೆ ಬರೀ ರಾಜ್ಯಮಟ್ಟದಲ್ಲಲ್ಲ, ರಾಷ್ಟ್ರೀಯ ನೀತಿ ಬೇಕಾಗಿದೆ. ಟೆಕ್ಸ್‌ಟೈಲ್ಸ್ ಪಾಲಿಸಿ ಬದಲಾಯಿಸಬೇಕು. ಹ್ಯಾಂಡ್‌ಲೂಂಗೆ ಅದರಿಂದ ಅನುಕೂಲ ಸಿಗಬೇಕು. ಆಗ ಮಾತ್ರ ಇದನ್ನು ಬೆಳೆಸುವುದಕ್ಕೆ ಸಾಧ್ಯ. ಇದರ ಬಗ್ಗೆ ಕೂಡ ಕೇಂದ್ರದ ಜೊತೆ ಸಮಾಲೋಚನೆ ನಡೆಸಬೇಕು. ಅಂತಹ ನೀತಿಯನ್ನು ಅನುಸರಿಸುವುದಾದರೆ ನಾವೂ ಬೆಂಬಲ ಕೊಡುತ್ತೇವೆ. ಶ್ರೀ ಕಾಗೋಡು ತಿಮ್ಮಪ್ಪನವರು ಬಡಜನರ ಬಗ್ಗೆ ಯಾವ ಕಾರ್ಯಕ್ರಮವೂ ಹಾಕಿಲ್ಲ ಎಂದು ಹೇಳಿದರು; ಬಡಜನರಿಗೆ ಅನುಕೂಲವಾಗುವಂತೆ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಮನಸ್ಸೂ ಇಲ್ಲ ಎಂಬ ಮಾತನ್ನು ಹೇಳಿದರು. ಕರ್ನಾಟಕಕ್ಕೆ ಆ ಮಾತು ಅನ್ವಯಿಸುವುದಿಲ್ಲ. ನಮಗೆ ಅಂಥ ಕಾರ್ಯಕ್ರಮ ಹಾಕಬೇಕು ಎಂಬ ಭಾವನೆ ಸಾಕಷ್ಟಿದೆ. ಅಲ್ಲದೆ ಆರ್ಥಿಕ ಮಿತಿ ಕೂಡ ಇದೆ. ನಾವು ಅಂದುಕೊಂಡಂತೆಯೆಲ್ಲಾ ಮಾಡುವುದಕ್ಕಾಗುವುದಿಲ್ಲ. ದಕ್ಷತೆ ಇದು ಕರ್ನಾಟಕದಲ್ಲೇ ಅಲ್ಲ, ರಾಷ್ಟ್ರದಲ್ಲೆಲ್ಲಾ ಬೆಳೆದುಬಂದರೆ ಹೆಚ್ಚಿನ ರೀತಿಯಲ್ಲಿ ಈ ಕೆಲಸ ಮಾಡುವುದಕ್ಕೆ ಸಾಧ್ಯ. ಇದು ಎಲ್ಲ ಮಟ್ಟದಲ್ಲಿ ಅವಶ್ಯಕ. ಕೆಲಸ ಮಾಡುವಂತಹ ಒಳ್ಳೆಯ ಸಂಸ್ಥೆಗಳನ್ನು ಕಟ್ಟಿ ದಕ್ಷತೆಯಿಂದ ನಡೆಸಬೇಕು. ಆಗ ಮಾತ್ರ ಎಲ್ಲ ಕಾರ್ಯಕ್ರಮ ಮುಂದುವರಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಬಡಜನರ ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಬರೀ ಹಣಕಾಸಿನ ವಿಷಯ ಮಾತ್ರವಲ್ಲ. ಕೆಲಸ ಮಾಡತಕ್ಕ ಜನ ಬೇಕು. ಇವತ್ತು ಎಲ್ಲಾ ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತಿದ್ದಾರೆಯೇ ಹೊರತು.........

ಶ್ರೀ ಕೋಣಂದೂರು ಲಿಂಗಪ್ಪ.—ಬಡಜನರ ಬಗ್ಗೆ ಭಾಷಣ ಮಾಡಿದವರು ಮತ್ತು 20 ಅಂಶದ ಕಾರ್ಯಕ್ರಮ ಹೇಳಿದವರು ನೀವು.

ಶ್ರೀ ಎಂ. ವೈ. ಘೋರ್ಪಡೆ.—ಎಲ್ಲಿಯವರೆಗೆ ಸರಿಯಾದ ಸಂಸ್ಥೆಗಳನ್ನು ಕಟ್ಟಿ ಕೆಲಸಗಳನ್ನು ಕಾರ್ಯಗತ ಮಾಡುವುದಿಲ್ಲ ಅಲ್ಲಿಯವರೆಗೆ ಬರೀ ಭಾಷಣವಾಗಿ ಎಲ್ಲಾ ಉಳಿಯುತ್ತದೆ. ಈ ಮಾತು ಎಲ್ಲರಿಗೂ ಅನ್ವಯಿಸುತ್ತದೆ. ನೀವು ಮಾತುಮಾತಿಗೆ ಟೀಕೆ ಮಾಡಿದರೆ ಏನು ಮಾಡುವುದು ? ನಾವು ಎಷ್ಟು ಕೆಲಸ ಮಾಡಲಿಕ್ಕೆ ಸಾಧ್ಯ ಅಷ್ಟನ್ನು ಮಾಡಿದ್ದೇವೆ. ಜನತಾ ಪಕ್ಷ ಇನ್ನೂ ಮಾಡಿ ತೋರಿಸಲಿ. ನಮಗಿಂತ ಹೆಚ್ಚಾಗಿ ಬಡಜನರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲಿ.

ಶ್ರೀ ಕೋಣಂದೂರು ಲಿಂಗಪ್ಪ.— 20 ಅಂಶದ ಘೋಷಣೆ ಮಾಡಿದ್ದೆಲ್ಲಾ ಶೋಷಣೆ; ಇಷ್ಟನ್ನಾದರೂ ಒಪ್ಪಿಕೊಳ್ಳಿ.

ಶ್ರೀ ಎಂ. ವೈ. ಘೋರ್ಪಡೆ.—ಬರೀ ಮಾತನಾಡುವುದು ಸರಿಯಲ್ಲ. ನೀವು ಮಾಡಿ ತೋರಿಸಿ.

ಶ್ರೀ ಕೋಣಂದೂರು ಲಿಂಗಪ್ಪ.—ಮಾಡಿ ತೋರಿಸುತ್ತೇವೆ.

ಶ್ರೀ ಎಂ. ವೈ. ಘೋರ್ಪಡೆ.—ಬಡಜನರಿಗೆ ಬೇಕಾದಂಥ ಕಾರ್ಯಕ್ರಮ ಹಾಕಿಕೊಂಡರೆ ನಿಮಗೆ ನಾವು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ರಾಜಕೀಯ ಉದ್ದೇಶದಿಂದ ಒಳ್ಳೆಯ ಕಾರ್ಯಕ್ರಮವನ್ನು ವಿರೋಧಿಸುವ ದಡ್ಡತನಕ್ಕೆ ನಾವು ಹೋಗುವುದಿಲ್ಲ. ಅಂತಹ ದುರಹಂಕಾರ ನಮಗಿಲ್ಲ. ನಾವು ಮಾಡುವುದಕ್ಕಾಗಲಿಲ್ಲ ಎಂದರೆ ನೀವಾದರೂ ಮಾಡಿ ತೋರಿಸಿ.

ಶ್ರೀ ವಿ. ಎನ್. ಪಾಟೀಲ್.—ಒಟ್ಟಿನಲ್ಲಿ ಒಳ್ಳೆಯ ಕೆಲಸ ನಮ್ಮಿಂದ ಆಗಿಲ್ಲ, ನೀವಾದರೂ ಮಾಡಿ ಎಂದು ವಿಲ್ ಬರೆದು ಹೋಗಬೇಡಿ.

ಶ್ರೀ ಎಂ. ವೈ. ಘೋರ್ಪಡೆ.—ಗೃಹ ನಿರ್ಮಾಣ ಕಾರ್ಯಕ್ಕೆ ಸುಮಾರು 8 ಕೋಟಿ ರೂಪಾಯಿ ಇಟ್ಟಿದ್ದೇವೆ. ಈಗಾಗಲೇ ಗೃಹ ನಿರ್ಮಾಣ ಕಾರ್ಯ ನಡೆಯುತ್ತಿದೆ. ಬಜೆಟ್ಟಿನಲ್ಲಿ ಒದಗಿಸಿರುವ ಹಣವನ್ನು ಬೆನ್ನುಹತ್ತಿ ಖರ್ಚು ಮಾಡಿಸಬೇಕು. ಕೊಟ್ಟಿರತಕ್ಕ ಹಣದಿಂದ ಮನೆಗಳನ್ನು ಅಧಿಕಾರಸ್ಥರಿಂದ ಕಟ್ಟಿಸಬೇಕು. ಎಷ್ಟೋ ಕಡೆ ಆಸಕ್ತಿ ವಹಿಸಿ ಕಟ್ಟಿಸಿದ್ದಾರೆ ಇನ್ನು ಕೆಲವು ಕಡೆ ಯಾವುದೋ ಕೆಲವು ಕಾರಣಗಳಿಂದ ಕಟ್ಟಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ 1250 ರೂಪಾಯಿ ವೆಚ್ಚದಲ್ಲಿ ಮನೆಗಳನ್ನು ಕಟ್ಟಿಸಿದ್ದೇವೆ ಅದು ಚೆನ್ನಾಗಿದೆ ಮಳೆಯಲ್ಲೂ ಕೂಡ ವಾಸ ಮಾಡಲಿಕ್ಕೆ ಅಲ್ಲಿ ಸಾಧ್ಯವಿದೆ. ಕೆಲವು ಜನರು ತಾವೇ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಇಷ್ಟಪಟ್ಟರೆ ಅಬಗ್ಗೆ 250 ರೂಪಾಯಿ ಬೆಲೆ ಬಾಳುವ ಸಾಮಗ್ರಿಗಳನ್ನು ಕೊಡಲಾಗುವುದೆಂದು ತಿಳಿಸಲಾಗಿದೆ. ಯಾವ ಕಾರಣದಿಂದಲೂ ಹಾನಿಯಾಗದಂತೆ ಮನೆಗಳನ್ನು ಕಟ್ಟತಕ್ಕ ಒಳ್ಳೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದು ಬಹಳ ಉತ್ತಮವಾದ ಯೋಜನೆ. ಆದರೆ ಅದರ ಕಡೆ ಸಾಕಷ್ಟು ಪ್ರಜ್ಞೆ ನಮ್ಮ ರಾಜ್ಯದಲ್ಲಿ ಬೆಳೆದು ಬಂದಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಪ್ರಾಪಗಾಂಡ ಮಾಡಿ. ಜನ ನೋಡಿ ಮೆಚ್ಚಿದರೆ ಒಪ್ಪಿಕೊಳ್ಳಲಿ. ಸೊಂಡೂರಿನಲ್ಲಿ ನಾವು ಅದನ್ನು ಮಾಡಿದ್ದೇವೆ. ಅಲಾಟ್ ಮಾಡುವಾಗ ಜಾತಿ ಮತ ನೋಡುತ್ತಾರೆ ಎಂದು ಹೇಳುತ್ತಾರೆ. ನಾವು ಆ ರೀತಿ ಮಾಡಿಲ್ಲ. ಎಲ್ಲ ಜಾತಿ ಮತಗಳಿಗೆ ಸೇರಿದಂಥ ಜನರಿಗೆ ಮನೆಗಳನ್ನು ಅಲಾಟ್ ಮಾಡುತ್ತಿದ್ದೇವೆ. ವಿಶೇಷತಃ ಗಮನ ಕೊಟ್ಟು ಎಲ್ಲರಿಗೂ ಅನುಕೂಲವಾಗುವಂತೆ ಮನೆಗಳನ್ನು ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮನೆಗಳನ್ನು ಕಟ್ಟಿಸಿ ಕೊಳ್ಳಲು 1200 ರೂಪಾಯಿ ಕೊಡುತ್ತೀರಿ. ಆದರೆ ಮೆಟೀರಿಯಲ್ ಕೊಡುತ್ತೀರಿ ಸಂಬಂಧಪಟ್ಟ ಅಧಿಕಾರಿ ಯಾರೋ ಒಬ್ಬ ಕಂಟ್ರಾಕ್ಟರಿಗೆ ಕೆಲಸ ವಹಿಸಿ ಮರ, ಹೆಂಚು, ಕಲ್ಲು, ಎಲ್ಲಾ ಸಪ್ಲೈ ಮಾಡಿಸುತ್ತಾರೆ. ಹಣ ಪೋಲಾಗಬಾರದು, ಅದಕ್ಕೆ ಭದ್ರತೆ ಇರಬೇಕು ನಿಜ. ನಾನು ಹೇಳುವುದೇನೆಂದರೆ ತಾವು ಮೆಟೀರಿಯಲ್ ಸಪ್ಲೈ ಮಾಡುವುದು ಬೇಡ. 500 ರೂಪಾಯಿ ಬೇರೆ ಕಡೆ ಆಗತಕ್ಕ ಸಾಮಾನಿಗೆ ಇವರು 700—800 ಹಾಕುತ್ತಾರೆ. ಅದರ ಬದಲು ಗೋಡೆ ಹಾಕಿದ ಕೂಡಲೇ ಇಷ್ಟು ದುಡ್ಡು ಮತ್ತು ಇನ್ನೊಂದು ಹಂತಕ್ಕೆ ಬಂದಮೇಲೆ ಇಷ್ಟು ದುಡ್ಡು ಎಂದು ಕೆಲಸ ಮಾಡಿದಂತೆ ಹಣ ಕೊಡುತ್ತಾ ಹೋಗಿ. ನೀವೇ ಮೆಟೀರಿಯಲ್ ಸಪ್ಲೈ ಮಾಡತಕ್ಕ ಜವಾಬ್ದಾರಿ ವಹಿಸಿಕೊಳ್ಳಬೇಡಿ. ಮೆಟೀರಿಯಲ್ ಕೊಡುವುದನ್ನು ನಿಲ್ಲಿಸಿ.

ಶ್ರೀ ಎಂ. ವೈ. ಘೋರ್ಪಡೆ.—ನೀವು ಹೇಳಿದಂತೆ ಎಲ್ಲ ಕಡೆ ಆಗುತ್ತದೆ ಎಂದು ನಾನು ಭಾವಿಸುವುದಿಲ್ಲ. ಕೆಲವು ಕಡೆ ಆಸ್ಬೆಸ್ಟಾಸ್ ಕೊಂಡುಕೊಂಡಿದ್ದಾರೆ. ಸಿಮೆಂಟ್ ಪಿಲ್ಲರ್ಸ್ ಕ್ಯಾಸ್ಟ್ ಮಾಡಿದ್ದಾರೆ. ಎಲ್ಲ ಸಾಮಾನು ಕೊಡಿಸಿ ನೀವೇ ಮಾಡಿಕೊಳ್ಳಿ ಎಂದು ಬಿಟ್ಟಿದ್ದೇವೆ. ಪರಿಸ್ಥಿತಿಗನುಗುಣವಾಗಿ ನಾವು ಅದನ್ನು ಮಾಡಬೇಕು. ಒಂದೇ ಪದ್ಧತಿಯನ್ನು ಎಲ್ಲ ಕಡೆ ಅನ್ವಯಿಸುವುದಕ್ಕಾಗುವುದಿಲ್ಲ. ಹರಿಜನರ ಹಾಸ್ಟಲ್‌ಗಳ ಬಗ್ಗೆ ಹೇಳಿದ್ದೀರಿ. ಅದನ್ನು ನಾನು ನೋಡಿಸುತ್ತೇನೆ. ಅದರ ಬಗ್ಗೆ ನಮಗೆ ಸಾಕಷ್ಟು ಸಹಾನುಭೂತಿ ಇದೆ. ಬರಗಾಲ ಬಂದಿದ್ದಾಗ ಬಿದರ್ ಹೋಗಿದ್ದೆ. ಹಾಸ್ಟಲ್‌ಗಳನ್ನು ನೋಡಿದ್ದೇನೆ. ಹಾಸ್ಟಲ್ ಹುಡುಗರಿಗೆ ಅನುಕೂಲ ಮಾಡಿ ಕೊಡುತ್ತಿದ್ದೇವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಅವರದೇ ಆದ ಧಾಟಿಯಲ್ಲಿ ನನ್ನ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. 'ಇವರಿಗೇನೂ ಅರ್ಥವಾಗುವುದಿಲ್ಲ, ಇವರು ಗೊಬ್ಬರದ ಬುಟ್ಟಿ ಹೊತ್ತುಕೊಂಡು ಹೋದವರಲ್ಲ; ಎಂದು ನನ್ನ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾನು ಉತ್ತರವಾಗಿ ಹೇಳುವುದು ಇಷ್ಟೇ. ಮಹಾತ್ಮ ಗಾಂಧೀಜಿಯವರು ಗೊಬ್ಬರದ ಪುಟ್ಟಿ ಹೊತ್ತು ಹೋದವರಲ್ಲ. ಅವರ ತಂದೆ ದಿವಾನರಾಗಿದ್ದರು. ನಿಮ್ಮ ಪಕ್ಷದ ನಾಯಕರೂ ಕೂಡ ಗೊಬ್ಬರದ ಪುಟ್ಟಿ ಹೊತ್ತು ಹೋದವರಲ್ಲ. ನೀವೂ ಎಷ್ಟರಮಟ್ಟಿಗೆ ಹೊತ್ತಿದ್ದೀರೋ ಗೊತ್ತಿಲ್ಲ. ಆದರೆ ಭಾಷಣದಲ್ಲಿ ಒಂದೊಂದು ಸಲ ಆ ಕೆಲಸ ಮಾಡುತ್ತೀರಿ. (ನಗು) ಗೊಬ್ಬರದ ಬುಟ್ಟಿ ತಲೆ ಮೇಲೆ ಹೊತ್ತವರು ಮಾತ್ರ ದೇಶದ ಬಗ್ಗೆ ಚಿಂತನ ಮಾಡಲಿಕ್ಕೆ, ಸೇವೆ ಮಾಡಲಿಕ್ಕೆ ಸಾಧ್ಯವಿದೆ. ಅಧಿಕಾರವಿದೆ ಎಂದು ಹೇಳುವುದಾದರೆ ಈ ಮಾತನ್ನು ಅವರ ಪಕ್ಷದ ಹಿರಿಯರೇ ಒಪ್ಪುವುದಿಲ್ಲ. ಆ ಬೇಸಿಸ್ ಮೇಲೆ ಹೋದರೆ ಅಂತಹ ಜನ ಸಿಗುವುದಿಲ್ಲ. ಆದ್ದರಿಂದ ಆ ರೀತಿ ಹೇಳುವುದು ಬೇಡ. ನನ್ನ ಮೇಲೆ ಮಾನ್ಯ ಸದಸ್ಯರು ಇನ್ನೂ ಒಂದು ಅಪಾದನೆ ಮಾಡಿದ್ದಾರೆ.

ನಾನು ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಎಂ.ಎ. ಪರೀಕ್ಷೆಯನ್ನು ಪಾಸ್ ಮಾಡಿದ್ದೇ ನನ್ನ ದೊಡ್ಡ ಅಪರಾಧವಾಗಿದೆ ಅಲ್ಲವೆ ? ಆದರಿಂದ ಯಾರಿಗೆ ಅನಾಹುತವಾಯಿತು ? ಮುಂಚೆ ಇಲ್ಲಿ ರಾಜ್ಯವಾಳುತ್ತಿದ್ದವರು ಏನು ಕೇಂಬ್ರಿಡ್ಜ್ ಯೂನಿವರ್ಸಿಟಿಗೆ ಹೋಗಿ ಬಂದಿಲ್ಲವೆಂದು ಹೇಳಿದಿರಿ. ಆದರೆ ಅವರಿಗಿಂತ ನಾವು 10 ರಷ್ಟು ಪ್ರಗತಿಯನ್ನು ಈ 5 ವರ್ಷಗಳಲ್ಲಿ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೇಳಿದ್ದು ನೀವು ಕೇಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಓದಿ ಬಂದಿದ್ದೀರಿ, ಆದರೆ ಹರುಕು ಮುರುಕು ಶಾಲೆಗಳಲ್ಲಿ ನೆಲದ ಮೇಲೆ ಕುಳಿತು ಓದಿದ್ದರೆ, ಅಂಥ ಶಾಲೆಯಲ್ಲಿ ಓದಿ ಇಂಥ ಸ್ಥಾನಕ್ಕೆ ಬಂದಿರುವುದರಿಂದ ಹೇಗೆ ತನ್ನ ಕಾರ್ಯವನ್ನು ನಿರ್ವಹಿಸಬೇಕೆಬುಂದು ಗೊತ್ತಾಗುತ್ತಿತ್ತು ಎಂದು.

ಶ್ರೀ ಎಂ. ವೈ. ಘೋರ್ಪಡೆ.—ನಾನು ಸಹ ಹಳ್ಳಿಯ ಮಟ್ಟದ ಶಾಲೆಗಳಲ್ಲಿ ಓದಿದವನು. ಆದರೆ ಸತ್ಯವನ್ನು ಹೇಳುತ್ತೇನೆ, ನಾನು ಗೊಬ್ಬರದ ಬುಟ್ಟಿಯನ್ನು ಹೊತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಕೇಂಬ್ರಿಡ್ಜ್ ಯೂನಿವರ್ಸಿಟಿಯಲ್ಲಿ ಓದಿಬಂದವರು ನಮ್ಮ ಅರ್ಥ ಸಚಿವರಾಗಿರುವುದು ಬಹಳ ಸಂತೋಷ.

SRI M. Y. GHORPADE.—He can defend himself. Why do you come to his help ?

ಶ್ರೀಮತಿ ದಮಯಂತಿ ಬೋರೇಗೌಡ.—ಅದಕ್ಕೆ ಒಂದು ಶಾಲಾ ಕೊಠಡಿಯನ್ನು ಕಟ್ಟಿಸುವುದಕ್ಕೆ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಹಿಂದೆ ಅಷ್ಟನ್ನು ಕೊಡುತ್ತಿರಲಿಲ್ಲ. ಈಗ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೊಟ್ಟರೂ ಒಂದು ಕೊಠಡಿಯನ್ನು ಕಟ್ಟಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ 2 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರೆ 4 ಸಾವಿರ ರೂಪಾಯಿಗಳ ಎಸ್ಟಿಮೇಟ್ ಆಗುತ್ತಿತ್ತು. ಈಗ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೊಟ್ಟರೆ 9 ಸಾವಿರ ರೂಪಾಯಿಗಳ ಎಸ್ಟಿಮೇಟ್ ಆಗುತ್ತದೆ.

ಶ್ರೀ ಸಿ. ಬೈರೇಗೌಡ.—ಹಳ್ಳಿಗಳ ಕಡೆ ಏನೋ ಶಾಲಾ ಕಟ್ಟಡಗಳನ್ನು ಕಟ್ಟಿಸಲಿಕ್ಕೆ ನಾಲ್ಕು ವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಆದರೆ ನಗರ ಪ್ರದೇಶಗಳಲ್ಲಿ ಯಾರ ಹತ್ತಿರ ಡೊನೇಷನ್ಸ್ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಈಗ ರೂಲ್ಸನ್ನು ರಿಲಾಕ್ಸ್ ಮಾಡಿ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದ ಜಾಗದಲ್ಲಿ ನಾಲ್ಕೂವರೆ ಸಾವಿರ ರೂಪಾಯಿಗಳನ್ನು ಕೊಡುವ ಏರ್ಪಾಡು ಮಾಡಿದ್ದೇವೆ.

ಇನ್ನು ಅಟೆಂಡೆನ್ಸ್ ಬಗ್ಗೆ ಹೇಳಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತಿನ ದಿವಸ ಎಜುಕೇಷನ್ ಬಹಳ ಪೂರ್ ಇರುವುದರಿಂದ ಅದನ್ನು ಉತ್ತಮಗೊಳಿಸುವ ಸಲುವಾಗಿ ನ್ಯೂಟ್ರಿಷನ್ ಪ್ರೋಗ್ರಾಂನ್ನು ಹಾಕಿಕೊಂಡಿದ್ದೇವೆ. ಈ ಒಂದು ಕಾರ್ಯಕ್ರಮದಿಂದ ಅಟೆಂಡೆನ್ಸ್ ಇಂಪ್ರೂವ್ ಆಗುತ್ತದೆ ಮತ್ತು ಎಲ್ಲ ದೃಷ್ಟಿಯಿಂದಲೂ ಇದು ಒಂದು ಉತ್ತಮ ಕಾರ್ಯಕ್ರಮ ವಾಗಿದೆ. ಈ ನ್ಯೂಟ್ರಿಷನ್ ಪ್ರೋಗ್ರಾಂನಿಂದ ಶಾಲೆಗಳಲ್ಲಿ ಕೆಲಸಗಳು ಸರಿಯಾಗಿ ನಡೆಯುವು ದಿಲ್ಲ, ಮತ್ತು ಅಲ್ಲಲ್ಲಿ ದುಡ್ಡು ತಿನ್ನುತ್ತಾರೆಂದರೆ ಯಾವ ಕಾರ್ಯಕ್ರಮಗಳನ್ನು ಮಾಡುವುದಕ್ಕಾಗು ವುದಿಲ್ಲ. ಇವತ್ತು ಯಾವುದಾದರೊಂದು ಕಾರ್ಯಕ್ರಮ ನಮ್ಮ ಕೈಗೆ ಸಿಕ್ಕಿದಾಗ ಅದನ್ನು ಧೈರ್ಯ ವಾಗಿ ಮಾಡುತ್ತೇವೆ, ಪ್ರಗತಿಪರವಾಗಿ ಮಾಡುತ್ತೇವೆ ಯಶಸ್ವಿಯಾಗಿ ಮಾಡುತ್ತೇವೆಂದು ಹೇಳ ಬೇಕೇ ವಿನಹ ದುಡ್ಡು ತಿನ್ನುತ್ತಾರೆಂದು ಹಿಂಜರಿಯಬಾರದು. ಸರ್ಕಾರದ ನೀತಿ ನಿಯಮಗಳ ಬಗ್ಗೆ ಎಷ್ಟೋ ಸಾರಿ ಹೇಳಿದ್ದೇನೆ. ಸರ್ಕಾರದ ಯಾವುದೇ ಯೋಜನೆಗಳಾಗಲಿ, the whole idea is to prevent wrong rather than promote what is right. ಏಕೆಂದರೆ ಎಲ್ಲರೂ ತಪ್ಪು ಮಾಡುತ್ತಾರೆಂದೇ ಗ್ರಹಿಸಿಕೊಂಡು ಹೋಗುತ್ತಾರೆ. ಹೀಗೆ ಒಂದು ನಿರಾಶೆಯ ವಿಚಾರವನ್ನು ನಾವು ನಮ್ಮ ತಲೆಯಲ್ಲಿ ಇಟ್ಟುಕೊಂಡು ಹೋಗುವುದಾದರೆ ಯಾವ ಕಾರ್ಯಕ್ರಮ ಗಳನ್ನು ನಾವು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಇವತ್ತು ನಮ್ಮ ದೇಶದಲ್ಲಿ ಹೊಸ ವಾತಾವರಣ ಬಂದು ಒಂದು ಹೊಸ ಅನುಭವ ಬಂದಿದೆ. ಈಗಲಾದರೂ ಸಹ ಸರ್ಕಾರ ಹಾಕತಕ್ಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತೇವೆಂದು ಧೈರ್ಯವಾಗಿ ಹೇಳಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಅವರ ಕಾಲದಲ್ಲಿ ಸಾಕಷ್ಟು ಚಳುವಳಿಗಳನ್ನು ಮಾಡಿರತಕ್ಕವರು. ಅವರಿಗೆ ಈ ರೀತಿ ಹೇಳಿದರೆ ಏನು ಮಾಡುವುದಕ್ಕಾಗುತ್ತದೆ 23 ಸಾವಿರ ಹುಡುಗರಿಗೆ ಒಂದಾನೊಂದು ರೀತಿ ಯಲ್ಲಿ ಮಿಡ್ ಡೇ ಮೀಲ್ಸನ್ನು ಕೊಡಬೇಕಾಗಿದೆ. ಆದರೆ ನೀವು ಅದನ್ನು ಮಾಡುವುದು ಬೇಡ, ರಾಗಿ ಮುದ್ದೆ, ಜೋಳದ ಮುದ್ದೆಗಳನ್ನು ಕೊಡಿರಿ ಎಂದರೆ I am prepared for that. I have open mind. ನಮ್ಮ ದೇಶದಲ್ಲಿ ಅದನ್ನು ಎಕ್ಸ್‌ಪರಿಮೆಂಟ್ ಮಾಡಿ ನೋಡಬೇಕು. ಈ ಬಗ್ಗೆ ಸರ್ಕಾರವನ್ನು ಟೀಕಿಸುವುದಾದರೆ ಅದನ್ನು ಸಹ ಮಾಡುವುದಕ್ಕಾಗುವುದಿಲ್ಲ. Government has got open mind and see that 23 lakhs children wil get something. We are prepared to accept good ideas but not the defeatist tendency. We seek the co-operation of the members irrespective of their parties.

SRI B. B. SAYANAK.—You are appointing teachers in the month of February. Is that a justice to the boys? You are releasing the text books in the month of February. You must direct your authorities to release the books and appoint the teachers at the beginning of the School.

SRI M. Y. GHORPADE.—If there are specific points regarding Departments, it is best to disouss them when the demands on the Department are taken up.

ಇನ್ನು ಮಾನ್ಯ ಸಿದ್ಧಯ್ಯನವರು ಲೇಬರ್ ಕೋ-ಆಪರೇಟೀವ್ಸ್ ಬಗ್ಗೆ ಹೇಳಿದರು. ಆ ಬಗ್ಗೆ ಏನು ಆಕ್ಷೇಪಣೆ ಇಲ್ಲ; ಅವುಗಳನ್ನು ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವೋ ಅಲ್ಲಿ ಮಾಡಲಿ ಮಾನ್ಯ. ಕೆಂಚೇಗೌಡರು, ನಾವು ಜೋಳವನ್ನು ಯಾವ ಬೆಲೆಗೆ ವಿತರಣೆ ಮಾಡುತ್ತಿದ್ದೇವೆಯೋ

ಅದನ್ನು ಸಹ ಕಡಿಮೆ ಮಾಡಬೇಕೆಂದು ಹೇಳಿದರು. ಒಂದು ಕಡೆ ಹೇಳುತ್ತಾರೆ, ರೈತರಿಗೆ ಲೆವಿ ರೇಟನ್ನು ಜಾಸ್ತಿ ಮಾಡಬೇಕೆಂದು, ಮತ್ತೊಂದು ಕಡೆ ಹೇಳುತ್ತಾರೆ. ಅದನ್ನು ಮಾರಾಟ ಮಾಡುವಾಗ ರೇಟನ್ನು ತೀರಾ ಕಡಿಮೆ ಮಾಡಬೇಕೆಂದು. ಹೀಗಾದರೆ ನಾವು ಹೇಗೆ ಮಾಡಬೇಕು ? ನಾವು ಮೈಕ್ರಲೋವನ್ನು. 95 ಪೈಸೆಗೂ, ಗೋಧಿಯನ್ನು 70 ಪೈಸೆಗೂ ಹಂಚುತ್ತಿದ್ದೇವೆ

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೆ ಎಷ್ಟಕ್ಕೆ ಕೊಡುತ್ತಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಅದನ್ನು ನಾವು ಕೊಂಡುಕೊಳ್ಳುವುದಿಲ್ಲ ಅದು ಅವರು ಕೊಟ್ಟಿದ್ದು. ಅದನ್ನು ಹಾಗೆ ಕೊಡಲಿಕ್ಕೆ ಬಿಡುವುದಿಲ್ಲ. ಇಷ್ಟಕ್ಕೆ ಕೊಡಬೇಕೆಂಬ ಬಗ್ಗೆ ಒಪ್ಪಂದ ಮಾಡಬೇಕಾಗುತ್ತದೆ. I am speaking only on a limited point. But there has to be relationship between what we get from the farmers and what we sell to the buyers. ಮಾನ್ಯ ಕೆಂಚೇಗೌಡರಿಗೆ ಹಾಗೆ ಕೊಡಲಿಕ್ಕೆ ಸಾಧ್ಯವಾದರೆ ರೇಟ್ ಕಡಿಮೆಯಾಗಿ ರೈತರಿಗೆ ಪೆಟ್ಟಾಗುತ್ತದೆ. ಆಗ ಅವರಿಗೆ, ರೈತರಿಗೆ ಸರಿಯಾದ ರೇಟ್ ಕೊಡುತ್ತಿಲ್ಲ ಎಂದು ಟೀಕೆ ಮಾಡಬಾರದೆಂದು ಗೊತ್ತಾಗುತ್ತದೆ.

ಶ್ರೀ ಹೆಚ್. ಬಿ. ಕೆಂಚೇಗೌಡ.—ನಾನು ಹೇಳಿದ್ದು ಅಕ್ಕಿಯ ವಿಚಾರ. ಭತ್ತವನ್ನು ಕ್ವಿಂಟಾಲ್ ಒಂದಕ್ಕೆ 75 ರಿಂದ 90 ರೂಪಾಯಿಗಳಿಗೆ ತೆಗೆದುಕೊಳ್ಳುತ್ತಿದ್ದಾರೆ, ಅದನ್ನೇ ಅಕ್ಕಿಯನ್ನಾಗಿ ಪರಿವರ್ತನೆ ಮಾಡಿದರೆ 135-140 ರೂಪಾಯಿಗಳು ದೊರೆಯುತ್ತವೆ. ಆದರೆ ಅಕ್ಕಿಯನ್ನು 215 ರೂಪಾಯಿಗಳಿಗೆ ಮಾರುತ್ತಿದ್ದಾರೆ. ಆದ ಕಾರಣ ಇಷ್ಟು ವ್ಯತ್ಯಾಸ ಏಕೆ ಬೇಕೆಂದು ಹೇಳಿದ್ದು.

SRI M. Y. GHORPADE.—Every time this has come up and every effort is made. ಮಾನ್ಯ ನಾಗಣ್ಣನವರು ದುಡ್ಡುಕೊಟ್ಟು ಓಟು ಹಾಕಿಸಿಕೊಂಡಿದ್ದಾರೆಂದು ಹೇಳಿದರು.

ಶ್ರೀ ಕೆ. ಎಂ. ನಾಗಣ್ಣ.—ದುಡ್ಡು ಮತ್ತು ಸೀರೆಯನ್ನು ಕೊಟ್ಟಿದ್ದಾರೆಂದು ಹೇಳಿದೆ.

ಶ್ರೀ ಎಂ. ವೈ. ಘೋರ್ಪಡೆ.—ಅವರೆ, ದಕ್ಷಿಣ ಹಿಂದೂಸ್ಥಾನದಲ್ಲಿ ದಾಕ್ಷಿಣ್ಯ ಹೆಚ್ಚಿಗೆ ನಡೆದಿಲ್ಲ ಎಂದು ಪ್ರಧಾನಿಯವರೇ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—100 ಕೋಟಿ ರೂಪಾಯಿಗಳನ್ನು ಡೆಲ್ಲಿ ಬ್ಯಾಂಕಿನಿಂದ ವಿತ್‌ಡ್ರಾ ಮಾಡಿರತಕ್ಕದ್ದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ಮಂಜುನಾಥರವರು ಹಿಂದುಳಿದ ವರ್ಗಗಳ ಆಯೋಗದ ವರದಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇನ್ನೂ ಕೆಲವರನ್ನು ಹಿಂದುಳಿದ ವರ್ಗದ ಪಟ್ಟಿಗೆ ಸೇರಿಸಬೇಕೆಂದು ಹೇಳಿದ್ದಾರೆ. ನಾನು ನನ್ನ ಆಯವ್ಯಯ ಭಾಷಣದಲ್ಲಿ "Government have decided to set-up an Advisory Committee to go into the claims of other backward social groups who may be eligible for such benefits" ಎಂದು ಹೇಳಿದ್ದೇನೆ. ಆದ್ದರಿಂದ ಇನ್ನು ಯಾರು ಸೇರಿಸಬೇಕೆಂದು ಮನವಿ ಬರುತ್ತದೋ ಅವರನ್ನು ಸೇರಿಸಿಕೊಳ್ಳುತ್ತೇವೆ.

3-30. ಪಿ.ಎಂ.

ಶ್ರೀ ಕೋಣಂದೂರು ಲಿಂಗಪ್ಪ.—ಅಡ್ವೈಸರಿ ಕಮಿಟಿಯಲ್ಲಿ ಯಾರು ಯಾರು ಇದ್ದಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಿದೆ. ಅದು ತಮಗೂ ಗೊತ್ತಾಗುತ್ತೆ, ರಾಮಯ್ಯನವರು ಮತ್ತು ಬೈರೇಗೌಡರು ಪ್ರಸ್ತಾಪ ಮಾಡಿರುವ ವಿಚಾರದಲ್ಲಿ ಯಾವ ತೊಂದರೆಯೂ ಇಲ್ಲ. ಅದನ್ನು ಲೋಕೋಪಯೋಗಿ ಇಲಾಖೆ ಮಾಡುತ್ತದೆ. ಇದಕ್ಕಾಗಿ ವರ್ಷಕ್ಕೆ 80 ಲಕ್ಷ ರೂಪಾಯಿ ಇದೆ.

ಶ್ರೀ ಸಿ. ಬೈರೇಗೌಡ.—ಐ.ಸಿ.ಆರ್.ಸಿ. ರಸ್ತೆಗಳಿಗೆ ರೋಡ್ ಫಂಡಿನಿಂದ ಎಷ್ಟು ಕೊಟ್ಟಿದ್ದೀರಾ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ನಿರ್ದಿಷ್ಟವಾಗಿ ಕೇಳಿದ್ದೇನೆ. ಕಳೆದ ವರ್ಷ ಎಷ್ಟು ವಸೂಲಿ ಆಗಿತ್ತು; ಎಷ್ಟು ಖರ್ಚು ಮಾಡಿದ್ದೀರಾ ?

SRI M. Y. GHORPADE.—The collections towards this fund as follows —

1975-76	...	4.28 lakhs
1976-77	...	4.48 lakhs

During the first operation, there was delay in sanctioning works, and hence there was a short-fall in the expenditure. It is being worked out in consultation with the Accountant General. During 1976-77, as against a collection of Rs. 4.48 lakhs, a sum of Rs. 5.07 lakhs has been sanctioned. The nonutilised balance at the credit of the fund is non-lapsable and will be spent during the current financial year.

SRI KAGODU THIMMAPPA.—I have gone through the entire budget ಈ ಫಂಡಿನ ಕೆಳಗಡೆ ಯಾವ ಯಾವ ಬ್ರಿಡ್ಜಗಳನ್ನು ತೆಗೆದುಕೊಂಡಿದ್ದೀರಿ? ಇದನ್ನು ಬಡ್ಜೆಟ್ಟಿನಲ್ಲಿ ಏತಕ್ಕೆ ಸೇರಿಸಿದ್ದೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಬಡ್ಜೆಟ್ಟಿನಲ್ಲಿ ತೋರಿಸಬೇಕಾಗುತ್ತದೆ. But the mechanics is like that.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಬಿಟ್ಟರೆ ಬಡ್ಜೆಟ್ಟಿನಲ್ಲಿ ಯಾವ ವರ್ಕ್ಸ್ ತೆಗೆದುಕೊಂಡಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನನ್ನ ಜೊತೆಯಲ್ಲಿ ಚರ್ಚೆಗೆ ಬನ್ನಿ ಎಲ್ಲವನ್ನೂ ತೋರಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಎರಡು ವರ್ಷಗಳಲ್ಲಿ ರೋಡ್ ಫಂಡಿನಲ್ಲಿ ಯಾವ ಯಾವ ಕೆಲಸವನ್ನು ತಗೆದುಕೊಂಡಿದ್ದೀರಿ? you please prepare a list. Apart from that what are the budgetary works?

SRI M. Y. GHORPADE.—We have increased the road expenditure, but that may be insufficient in the opinion of the hon. members. The point that was made out by the hon. members was that we had deceived or mislead by the taking money under one fund and spending it in another fund. I have stated that this money cannot lapse. In fact our letter of Credit clearly shows what we have released and what we have received. If the hon. member wants to discuss other things, as to what should be done, I will fix up a discussion for one hour with him. But if he says that the road fund has been diverted to other works, then it becomes a serious charge, and I have to reply to it.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತ್ಯೇಕವಾಗಿ ರಸ್ತೆ ಮತ್ತು ಸೇತುವೆಗಳಿಗೆ ಹಣ ಕೊಡುವುದಿಲ್ಲ. ಚೀಫ್ ಇಂಜಿನಿಯರ್‌ರವರು ಟಾರ್ಜೆಟ್ ಪ್ರಕಾರ ಸರ್ಕಾರ್ ವೈಸೆ ಫಿಕ್ಸ್ ಮಾಡಿದ್ದಾರೆ ಅದಕ್ಕಿಂತ ಜಾಸ್ತಿ ಕೊಡುವುದಿಲ್ಲ. I had a discussion with Chief Engineer.

SRI M.Y. GHORPADE.—The hon. member is trying to say that the road fund is not enough and that it should be more. The whole plan includes this also. Road fund is Road fund it cannot be used for some other purpose. ಇದನ್ನು ಒಟ್ಟು ಸೇರಿಸಿಕೊಂಡು ಲೆಕ್ಕ ಹಾಕುತ್ತಾರೆ ಈ ಕೆಲಸಕ್ಕೆ ಇನ್ನು ಜಾಸ್ತಿ ಮಾಡಬೇಕು ಎನ್ನುವುದಾದರೆ ಅದು ಬೇರೆ ವಿಷಯ ವಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಜೂಜಿನಿಂದ ಕೋಟ್ಯಾಂತರ ರೂಪಾಯಿ ಸಂಪಾದನೆ ಮಾಡು ತ್ತೀರಾ? ಪ್ರೊಫೆಷನ್ ಟ್ಯಾಕ್ಸ್ ಮತ್ತು ಅಹಾರ ಧಾನ್ಯಗಳ ಮೇಲೆ ಹಾಕತಕ್ಕ ಸೇಲ್ಸ್ ಟ್ಯಾಕ್ಸ್ ವಜಾಮಾಡಿ ಎಂದು ಹೇಳಿದ್ದೇನೆ. ಈ ಬಗ್ಗೆ ತಾವು ಏನು ಹೇಳುತ್ತೀರಾ ಎಂದು ತಿಳಿದುಕೊಳ್ಳುವುದಕ್ಕೆ ಕಾತುರನಾಗಿದ್ದೇನೆ.

ಶ್ರೀ ಎಂ. ವೈ. ಘೋರ್ಪಡೆ,—ಪುಟ್ಟಸ್ವಾಮಿಯವರು ಹರಿಜನ ಗಿರಿಜನರ ಬಗ್ಗೆ ಆದ ಅನ್ಯಾಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಚುನಾವಣೆ ಆದ ನಂತರ ಈ ರೀತಿಯ ದೂರು ಗಳು ಬೇರೆ ಬೇರೆ ಕಡೆಯಿಂದ ಬರುತ್ತಿವೆ. ಚುನಾವಣೆಯ ಪರಿಣಾಮವಾಗಿ ಬಡ ಜನರ ಮೇಲೆ ಅನ್ಯಾಯ ನಡೆಸುವುದಾದರೆ ಖಂಡಿತವಾಗಿಯೂ ಹಾಗೆ ಅನ್ಯಾಯ ಮಾಡಲಿಕ್ಕೆ ಬಿಡುವುದಿಲ್ಲ. ಆ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳಬೇಕಾಗುತ್ತದೆ. ಇದರ ಬಗ್ಗೆ ಅನುಮಾನ ಪಡುವುದು ಬೇಡ ಎಂದು ಹೇಳುತ್ತೇನೆ. ಬಡ ಜನಕ್ಕೆ ಕರ್ನಾಟಕದಲ್ಲಿ ನಿರ್ಭಯವಾಗಿ ಜೀವನ ಮಾಡಲಿಕ್ಕೆ ಆಸ್ಪದ ಇದೆ. ಉತ್ತರದಲ್ಲಿ ಕಾಂಗ್ರೆಸ್ ಪಕ್ಷ ಸೋತಿದೆ ಎನ್ನುವ ಭಯ ಬೇಡ. ಕರ್ನಾಟಕದಲ್ಲಿ ಜನತೆಯಿಂದ ಆರಿಸಿಬಂದಂತ ಸರ್ಕಾರ ಆಡಳಿತ ನಡೆಸುತ್ತಿದ್ದು ಬಡ ಜನತೆಗೆ ರಕ್ಷಣೆ ಕೊಡುತ್ತ ದೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಬಡವರಿಗೆ ಯಾರಿಂದ ಅನ್ಯಾಯ ಆಗಿದೆಯೋ ಅಂಥ ವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ನಾವು ಹೇಳುತ್ತೇವೆ,

ಶ್ರೀ ಎಂ. ವೈ. ಘೋರ್ಪಡೆ.—ನಾನು ಬಡ್ಜೆಟ್ ಭಾಷಣ ಓದುವಾಗ ಎಂ.ಇ.ಎಸ್.ನವರು ವಾಕೌಟ್ ಮಾಡಿದರು ಎಂದು ನಾನು ಬೆಳಿಗ್ಗೆ ಪತ್ರಿಕೆ ನೋಡಿದಾಗ ತಿಳಿಯಿತು. ನಾನು ಲಕ್ಷ್ಯ ಕೊಟ್ಟು ಭಾಷಣ ಓದುತ್ತಿದ್ದಾಗ ವಾಕೌಟ್ ಮಾಡಿದ್ದನ್ನು ನೋಡಲಿಲ್ಲ. ಅವರು ವಾಕೌಟ್ ಮಾಡಿದ ತಕ್ಷಣ ಬೆಳಗಾವಿ ಕೈಬಿಟ್ಟುಹೋಯಿತು ಎಂದು ಯಾರೂ ತಿಳಿಯಬಾರದು. ಪದೇ ಪದೇ ಬೆಳಗಾವಿ ವಿಷಯ ತರಲಿಕ್ಕೆ ನೋಡುತ್ತಿದ್ದಾರೆ.

I do not oblige Sri Sayank by speaking in English. As a matter of fact I did not notice because I was engrosed in reading my statement. If I had noticed. I would certainly had told that this is a futile effort to walk out with prext or without pretext. Merely walking out does not mean that Belgaum will walk out from Karnataka, it will not. I have to say this because it is unfortunate that some Central Leaders should go to Belgaum and take a partisan view. The people who are well know for partisan view when they are in government, should refain from behaving in the manner be cause it goes quite contrary tothe accepted courtesies and conventions a federal set up, Because it has happened, I want to emphasise this point and let the people of Karnataka know what they can expect if they are going to allow such behaviour from the Central leaders.

SRI B.B. SAYANAK.—Do you mean to say that this is goondaism. Have I no right to walk out Do you say it is goondaism?

SRI M. Y. GHORPADE.—I have not used the word goondaism. The Hon. member has mis-heard me

SRI B. B. SAYANAK.—I do not want to learn morals from you.

SRI M. Y. GHORPADE.—This is a matter of Centre State relations and the central leaders will have to be very careful in dealing with the States especially with the Southern States. I wish to refer to the problem of Hindi. I want to remind the North through this. House of the assurance given by the late Jawaharlal Nehru that English will continue to be the link language as long as the people in the south want it. Now Sri Jawaharalal Nehru is not there he has left us. A time has come when this solemn assurance needs to be given a more statutory status and what may be the people from the South should now ask that this assurance should be now incorporated in the Constitution.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ದಕ್ಷಿಣದವರು ಹಿಂದಿ ಕಲಿಯದೇ ಹೋದರೆ ನೀವು ರಾಷ್ಟ್ರಮಟ್ಟದಲ್ಲಿ ನಿಮ್ಮ ಮುಖಂಡತ್ವ ಬೆಳಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸೆಂಟ್ರಲ್‌ನವರಿಗೆ ಇವರು ಹೇಳಬೇಕಾಗಿಲ್ಲ, ಮದ್ರಾಸಿಗೆ ಬಂದಿದ್ದಂತಹ ರಾಜನಾರಾಯಣ್ ಅವರು ಈ ಬಗ್ಗೆ ನಿಮಗಿಂತಲೂ ಚೆನ್ನಾಗಿ ಅಭಯ ಕೊಟ್ಟಿದ್ದಾರೆ

SRI M.Y. GHORPADE.—Nobody can abuse me that I am a linguistic chauvinism. Only yesterday at the Kannada Sahithya Parishat function I have said that if the nation has to become a strong nation all the languages in this country have to be strengthened and there is no question of not strengthening it. I would suggest that as many people learn as many languages as is possible not only Hindi. Let Hindi people learn one or two south Indian languages and let South Indian people learn English. Hindi and one or two foreign languages also. So, there is no difference there The question is, if you try to make political use of the situation and club it in disadvantageous position, then the south will not tolerate it.

I only hope that the relationship between the Central and the States in the country will develop on the mutual understanding and trust and confidence.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಮಾನ್ಯ ದೇವೇಗೌಡರು ಹೇಳಿ ಹೋಗಿರತಕ್ಕ ಎರಡು ಪ್ರಶ್ನೆ ಇದೆ. ಮೊದಲನೆಯದು, ಈಗ ಋಣ ಪರಿಹಾರ ಕಾನೂನು ತಂದು ಖಾಸಗಿ ಜನರನ್ನು ಸಾಲದಿಂದ ಮುಕ್ತಾಯ ಮಾಡಿದ್ದಾರೆ, ಅದೇ ರೀತಿ ಕೋ—ಅಪರೇಟೀವ್ ಸೊಸೈಟಿಗಳಲ್ಲಿ ಬ್ಯಾಂಕುಗಳಲ್ಲಿ ಸಣ್ಣ ಹಿಡುವಳಿದಾರರಿಗೆ ಸಂಬಂಧಪಟ್ಟ ಸಾಲ ಏನು ಇದೆ ಅದನ್ನು ರದ್ದುಪಡಿಸುವುದಕ್ಕೆ ಏತಕ್ಕೆ ತೀರ್ಮಾನ ಮಾಡಬಾರದು ಎರಡನೆಯದಾಗಿ ರೋಡ್ ಫಂಡ್ ಸುಮಾರು 6 ಕೋಟಿ ರೂಪಾಯಿಗಳ ಬಗ್ಗೆ ಒಂದು ಲೀಸ್ಟ್ ಆಫ್ ಬ್ರಿಡ್ಜಸ್ ಪಟ್ಟಿ ಮಾಡಿ ಹಣಕಾಸು ಇಲಾಖೆಗೆ ಕಳುಹಿಸಿದ್ದಾರೆ. ಮೊದಲ ಸಾರಿ 5 ಕೋಟಿ ರೂಪಾಯಿ ವಸೂಲಾಗಿದೆ. ಈ ಸಾರಿ 5 ಕೋಟಿ ರೂ ವಸೂಲಾಗುತ್ತದೆ ಅದಕ್ಕೋಸ್ಕರ 6 ಕೋಟಿ ರೂಪಾಯಿಗಳ ಲಿಸ್ಟ್ ಆಫ್

ಬ್ರಿಡ್ಜಸ್ ಪಟ್ಟಿ ಮಾಡಿ ಕಳುಹಿಸಿಕೊಟ್ಟರೆ ಅದಕ್ಕೆ ಮಂಜೂರಾತಿ ಕೊಡದೇ ಹಣಕಾಸು ಇಲಾಖೆಯಲ್ಲಿ ಟರ್ನ್ ಡೌನ್ ಮಾಡಿ ವಾಪಸ್ಸು ಕಳುಹಿಸಿದ್ದಾರೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

SRI M.Y. GHORPADE.—I have already replied to the second point. I have no statement to make with regard to the plea made by SRI Devegowda re. cancellation of all loans, when there is no decision on what point, there is no point in my saying anything on that point.

SRI KAGODU THIMMAPPA.—The file pertaining to the list of bridges proposed to be constructed at a cost of Rs. 5 crores which was sent to the Finance Department for approval has been turned down.

SRI M. Y. GHORPADE.—I shall exmine that file,

MADAM SPEAKER.—Now the discussion is concluded.

Resignation of Sri M. R. Jayaram.

ANNOUNCEMENT

MADAM SPEAKER.—As required by the rule 187 (2) of the Rules of Procedure and Conduct of Business in the Legislative Assembly. I have to inform the House that Sri M. R. Jayaram, an elected member of this House from Devanahally constituency has tendered resignation of his membership with effect from 25th April 1977. I have accepted his resignation.

The House stands adjourned to meet tomorrow at 9 A.M.

The House adjourned at Fifty Minutes Past Three of the Clock eet again at Nine of the Clock on Tuesday, the 26th April 1977.

WD 6538—GPB.